ಸಂಪುಟ : 9 ಸಂಚಿಕೆ 103 ಪುಟ : 4 ಬೆಲೆ: 3.00 ಶನಿವಾರ ಮೇ 25 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 103 Pages : 4 Price : 3.00 Saturday May 25 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಅಕ್ಕ ಅನ್ನಪೂರ್ಣ ಅಗಲಿಕೆ;

## ಡಾ. ತೋಂಟದ ಸಿದ್ಧರಾಮ ಶ್ರೀಗಳ ಸಂತಾಪ



■ವಿಜಯಸಾಕ್ಷಿ ಸುದ್ದಿ, ಗದಗ

ಬಸವತತ್ವನಿಷ್ಠರಾದ ಅಕ್ಕ ಅನ್ನಪೂರ್ಣ ಅವರು ದೇಶ-ವಿದೇಶಗಳಲ್ಲಿ ಬಸವಣ್ಣನವರ ತತ್ತ್ವ-ಸಂದೇಶಗಳನ್ನು ಸಾರಿದವರು. ಬಸವತತ್ತ್ವ ಪ್ರಚಾರಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದರು. ಕಲ್ಯಾಣ ಕರ್ನಾಟಕದ ತುಂಬೆಲ್ಲಾ ಅಕ್ಕ ಎಂದೇ ಜನಜನಿತರಾಗಿದ್ದರು. ಇಂದು ಅವರ ಅಗಲುವಿಕೆ ಕನ್ನಡ ನಾಡಿಗೆ, ಶರಣ ಲೋಕಕ್ಕೆ ತುಂಬಲಾರದ ಹಾನಿಯನ್ನುಂಟು ಮಾಡಿದೆ ಎಂದು ಗದಗ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

ಅಕ್ಕ ಅನ್ನಪೂರ್ಣ ಅವರು ಖ್ಯಾತ ಪ್ರವಚನಕಾರರು, ಶರಣ ಸಾಹಿತಿಗಳೂ ಆಗಿದ್ದರು. ಬಸವ ಸಂಪದ ಪ್ರಕಾಶನದ ಮೂಲಕ ನೂರಾರು ಕೃತಿಗಳನ್ನು ಪ್ರಕಟಿಸಿದ್ದರು. ಸ್ವತಃ 40ಕ್ಕೂ ಅಧಿಕ ವಚನ ಸಾಹಿತ್ಯದ ಕೃತಿಗಳನ್ನು ರಚಿಸಿದ್ದರು. ಬಸವ ಸೇವಾ ಪ್ರತಿಷ್ಠಾನ, ಲಿಂಗಾಯತ ಮಹಾಮಠ, ನೀಲಮ್ಮ ಬಳಗ, ಲಿಂಗಾಯತ ಸೇವಾ ದಳ, ಬಸವ ಸಂಪದ ಪ್ರಕಾಶನ, ಶಿವಯೋಗ ಸಾಧಕರ ಕೂಟ ಮುಂತಾದ ಅನೇಕ ಸಂಸ್ಥೆಗಳನ್ನು ಹುಟ್ಟುಹಾಕಿ ಬಸವತತ್ತ್ವಕ್ಕೆ ಮತ್ತಷ್ಟು ಶಕ್ತಿ ತುಂಬಿದ್ದರು. ಶರಣ ಸಂಗಮ, ಬಸವಜ್ಯೋತಿ, ವಾರ್ಷಿಕ ವಚನ ವಿಜಯೋತ್ಸವ, ಗುರುಬಸವ ಪುರಸ್ಕಾರ ಪ್ರದಾನ, ವಚನ ಪಾರಾಯಣ ಹೀಗೆ ಅನೇಕ ಯಶಸ್ವಿ ಕಾರ್ಯಕ್ರಮಗಳ ಮೂಲಕ ನಾಡಿನಾದ್ಯಂತ ಶರಣರ ಸಂದೇಶಗಳನ್ನು ಪ್ರಸಾರ ಮಾಡಿದ್ದರು. ಬಸವಾದಿ ಶಿವಶರಣರ ತತ್ತ್ವ-ಸಂದೇಶಕ್ಕೆ ಸದಾ ಮಿಡಿಯುತ್ತಿದ್ದ ಅಪರೂಪದ ವ್ಯಕ್ತಿಯೊಬ್ಬರು ಅಗಲಿದಂತಾಗಿದೆ ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

## ತುಂಗಭದ್ರೆಯನ್ನೇ ನಂಬಿದ್ದ ರೈತರಿಗೆ ನಿರಾಸೆ | ಸೊರಗಿದ ಅಡಿಕೆ, ಬಾಳೆ ತೋಟಗಳು

# ಕೃಪೆದೋರೋ ಮಳೆರಾಯ...

■ವಿಜಯಸಾಕ್ಷಿ ಸುದ್ದಿ, ಗದಗ

ಈ ಬಾರಿಯ ಭೀಕರ ಬರಗಾಲಕ್ಕೆ ಅನ್ನದಾತ ರೈತನ ಬದುಕು ಅಕ್ಷರಶಃ ಬೀದಿಗೆ ಬಿದ್ದಿದೆ. ಅತಿವೃಷ್ಟಿ-ಅನಾವೃಷ್ಟಿ ಎರಡೂ ಸಂದರ್ಭಗಳಲ್ಲಿ ರೈತರಿಗೆ ಸಂಕಷ್ಟ ಕಟ್ಟಿಟ್ಟಟ ಬುತ್ತಿ. ಬೇಸಿಗೆಯಲ್ಲಿ ಹಾಗೂ ಹೀಗೂ ನೀರಾವರಿಗೆ ಒಂದು ವ್ಯವಸ್ಥೆ ಮಾಡಿಕೊಂಡಿದ್ದರೂ ಬರದ ಭೀತಿ ತಪ್ಪಿದ್ದಲ್ಲ. ಒಂದೆಡೆ ಜಮೀನಿನಲ್ಲಿರುವ ಬೋರ್‌ವೆಲ್‌ಗಳು ದಿನೇ ದಿನೇ ಪಾತಾಳ ತಲುಪುತ್ತಿದ್ದರೆ, ಜಮೀನಿಗೆ ನೀರುಣಿಸುವುದಾದರೂ ಹೇಗೆ? ತುಂಗಭದ್ರಾ ನದಿ ತೀರದ ರೈತರ ಗೋಳಾಟವಂತೂ ದೇವರಿಗೇ ಪ್ರೀತಿ ಎನ್ನುವಂತಾಗಿದೆ. ಲಕ್ಷ ಲಕ್ಷ ಖರ್ಚು ಮಾಡಿ ಬೆಳೆದ ಅಡಿಕೆ, ಬಾಳೆ ತೋಟಗಳು ಒಣಗುತ್ತಿದ್ದು, ರೈತರು ಕಕ್ಕಾಬಿಕ್ಕಿಯಾಗಿದ್ದಾರೆ.

ಎದೆಯೆತ್ತರಕ್ಕೆ ಬೆಳೆದು ನಿಂತಿದ್ದ ಅಡಿಕೆ ತೋಟಗಳು ಬಳಲಿ ಬೆಂಡಾಗಿವೆ. ಇನ್ನೊಂದೆಡೆ, ಹಸಿರಾಗಿ ಬೆಳೆದು ನಿಂತಿದ್ದ ಬಾಳೆ ತೋಟಗಳು ಬೆಂಕಿ ಬಿಸಿಲಿಗೆ ಹಳದಿ ಬಣ್ಣಕ್ಕೆ ತಿರುಗಿ ಕಮರುತ್ತಿವೆ. ಲಕ್ಷಾಂತರ ಖರ್ಚು ಮಾಡಿ ಬೆಳೆದ ಬೆಳೆ ಕಣ್ಣ ಮುಂದೆಯೇ ಹಾಳಾಗುತ್ತಿದ್ದರೆ, ಮನೆ ಮಕ್ಕಳೇ ಸೊರಗಿಹೋದ ಅನುಭವ ರೈತರದ್ದು. ಈ ದೃಶ್ಯಗಳು



ಕಂಡುಬಂದಿದ್ದು, ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಹಮ್ಮಿಗಿ, ಗುಮ್ಮಗೋಳ ಸೇರಿ ಹಲವು ಗ್ರಾಮಗಳಲ್ಲಿ. ಬೆಂಕಿ ಬಿಸಿಲು ರೈತರು ಬದುಕನ್ನೇ ಸುಟ್ಟು ಹಾಕುತ್ತಿದೆ. ತುಂಗಭದ್ರಾ ನದಿ ತೀರದಲ್ಲಿ ತೋಟಗಾರಿಕೆ ಬೆಳೆ ಮಾಡಿಕೊಂಡು ರೈತರು ಖುಷಿಯಾಗಿದ್ದರು. ಆದರೆ, ಈ ವರ್ಷದ ಭೀಕರ ಬರಕ್ಕೆ ಅನ್ನದಾತರ ಬದುಕು ಬಾಡುತ್ತಿದೆ.

ಈ ಭಾಗದಲ್ಲಿ ರೈತರು ಹೆಚ್ಚಾಗಿ ಅಡಿಕೆ, ಬಾಳೆ ಬೆಳೆಯುತ್ತಾರೆ. ಆದರೆ, ಭೀಕರ ಬರ-ಕ್ಕೆ ಈಗಾಗಲೇ ತುಂಗಭದ್ರಾ ನದಿ ಸಂಪೂರ್ಣ ಬತ್ತಿಹೋಗಿದೆ. ಅಂತರ್ಜಲ ಪಾತಾಳಕ್ಕೆ ಕುಸಿದು ಬೋರ್‌ವೆಲ್‌ಗಳಲ್ಲಿ ನೀರು ಮರೀಚಿಕೆಯಾಗಿದೆ. ನದಿ ನಂಬಿ ತೋಟಗಾರಿಕೆ ಬೆಳೆ ಬೆಳೆದ ರೈತರು ಗೋಳಾಡುತ್ತಿದ್ದಾರೆ. ನೀರಿನ ಕೊರತೆಯಿಂದ ಲಕ್ಷಾಂತರ ಖರ್ಚು ಮಾಡಿ ಬೆಳೆದ ಅಡಿಕೆ, ಬಾಳೆ ತೋಟಗಳು ಬಿಸಿಲಿಗೆ ಒಣಗುತ್ತಿವೆ. ಅಡಿಕೆ ಬೆಳೆ ಫಸಲು ಪಡೆಯಬೇಕೆಂದರೆ ಮೂರ್ನಾಲ್ಕು ವರ್ಷ ಕಾಯುವುದು ಅನಿವಾರ್ಯ. ಖರ್ಚುಗಳೂ ತುಸು ಹೆಚ್ಚೇ ಇರುತ್ತವೆ. ಎರಡು ವರ್ಷಗಳಿಂದ ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿಕೊಂಡು ಬಂದಿದ್ದ ತೋಟವೀಗ ಒಣಗಿ ನಿರಾಸೆ ಮೂಡಿಸಿದೆ.

ತುಂಗಭದ್ರಾ ನದಿ ತೀರದ ಗ್ರಾಮಗಳ ರೈತರ ಬದುಕು ಈ ಮೊದಲು ಬಂಗಾರವಾಗಿತ್ತು. ನದಿ ನೀರು ಬಳಸಿ ಬಂಗಾರದಂಥ ಬೆಳೆ ಬೆಳೆದು ಖುಷಿಯಾಗಿದ್ದರು. ಆದರೆ, ಈ ಸಲದ ಭೀಕರ ಜಲಕ್ಷಾಮ ದಿಕ್ಕು ತೋಚದಂತೆ ಮಾಡಿದೆ. ರಾಜ್ಯದ ಕೆಲ ಭಾಗದಲ್ಲಿ ಭಾರಿ ಮಳೆ ಸುರಿಯುತ್ತಿದೆಯಾದರೂ, ಉತ್ತರ ಕರ್ನಾಟಕ ಭಾಗದಲ್ಲಿ ಇನ್ನೂ ಹೇಳಿಕೊಳ್ಳುವಷ್ಟು ಮಳೆಯಾಗಿಲ್ಲ. ಮನೆ ಬಳಕೆಗೂ ನೀರಿನ ಕೊರತೆಯಾಗುತ್ತಿರುವಾಗ, ತೋಟ ಉಳಿಸಿಕೊಳ್ಳುವುದಾದರೂ ಹೇಗೆ ಎಂಬ ಚಿಂತೆಯ ಬಲೆ ರೈತರನ್ನು ಸುತ್ತಿಕೊಳ್ಳುತ್ತಿದೆ. ಆಕಾಶದತ್ತ ದೃಷ್ಟಿ ಹರಿಸುವುದೇ ಕಾಯಕವಾಗಿರುವುದು ಬೇಸರದ ಸಂಗತಿ.

## ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

■ವಿಜಯಸಾಕ್ಷಿ ಸುದ್ದಿ, ಗದಗ

110 ಕೆವ್ಹಿ ಸಂಭಾಪೂರ ರೋಡ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕೆಲಸ ಕೈಗೊಳ್ಳುವುದರಿಂದ ಮೇ 28ರ ಮುಂಜಾನೆ 10 ಗಂಟೆಯಿಂದ ಸಾಯಂಕಾಲ 5.30 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ.

110 ಕೆವ್ಹಿ ಸಂಭಾಪೂರ ರೋಡ್ ಉಪಕೇಂದ್ರದಿಂದ ಪೂರೈಕೆಯಾಗುವ ಎಲ್ಲಾ ನಗರ, ನಿರಂತರಜ್ಯೋತಿ, ಕೃಷಿ ನೀರಾವರಿ ಪಂಪ್‌ಸೆಟ್‌ಗಳ ಮಾರ್ಗಗಳು ಮತ್ತು ಗ್ರಾಮೀಣ ಪ್ರದೇಶಗಳ ಎಲ್ಲಾ 11 ಕೆವ್ಹಿ ವಿತರಣಾ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಕಾರಣ ಸಾರ್ವಜನಿಕರು ಸದರಿ ಪ್ರಕಟಣೆ ಗಮನಿಸಿ ಕಂಪನಿಯೊಂದಿಗೆ ಸಹಕರಿಸಬೇಕಾಗಿ ಪ್ರಕಟಣೆ ತಿಳಿಸಿದೆ.

## ವಾರ್ಷಿಕ ಸೇವಾ ಶಿಬಿರದ ಉದ್ಘಾಟನೆ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಹಾಗೂ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಹು.ಸ.ಶಿ.ಸಂ. ಕಾನೂನು ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಘಟಕದ ವಾರ್ಷಿಕ ಸೇವಾ ಶಿಬಿರ 2023-24 ದತ್ತು ಗ್ರಾಮವಾದ ಬಿಂಕದಕಟ್ಟಿಯಲ್ಲಿ ಶನಿವಾರದಿಂದ ಮೇ 31ರವರೆಗೆ ಜರುಗಲಿದೆ. ಶನಿವಾರ ಸಾಯಂಕಾಲ 6 ಗಂಟೆಗೆ ಶ್ರೀ ಸದ್ಗುರು ರಾಮಕರುಣಾನಂದರ ಮಠದಲ್ಲಿ ಶಿಬಿರದ ಉದ್ಘಾಟನಾ ಸಮಾರಂಭ ನಡೆಯಲಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಹು.ಸ.ಶಿ.ಸಂಸ್ಥೆಯ ಅಧ್ಯಕ್ಷರಾದ ಆರ್.ಎಮ್. ಮೂಲಿಮನಿ ನೆರವೇರಿಸುವರು. ಘನ ಅಧ್ಯಕ್ಷತೆಯನ್ನು ಬಿಂಕದಕಟ್ಟಿ ಗ್ರಾ.ಪಂ ಅಧ್ಯಕ್ಷ ಪಿ.ಪಿ. ನದಾಫ್ ವಹಿಸಿಕೊಳ್ಳುವರು. ಮುಖ್ಯ ಅತಿಥಿಗಳಾಗಿ ಎಸ್.ಕೆ. ಪಾಟೀಲ, ಎಸ್.ಕೆ. ನದಾಫ್, ದ್ಯಾಮವ್ವ ಆರಟ್ಟಿ, ಡಿ.ಬಿ. ತಿರ್ಲಾಪುರ ಆಗಮಿಸುವರು. ಆರ್. ಎಸ್. ಪಾಟೀಲ, ಪಲ್ಲವಿ ಬುಯ್ಯಾರ, ಮಹಾಂತೇಶ ಕೊರಡಕೇರಿ ಹಾಗೂ ಎನ್.ಎಸ್.ಎಸ್. ವಿದ್ಯಾರ್ಥಿಗಳು ಭಾಗವಹಿಸುವರು ಎಂದು ಹು.ಸ.ಶಿ.ಸಂ. ಕಾನೂನು ಮಹಾವಿದ್ಯಾಲಯದ ಪ್ರಕಟಣೆ ತಿಳಿಸಿದೆ.

## ಡಿಮ್ಹಾನ್ಸ್ ಸಂಸ್ಥೆಯ ಸಭಾಂಗಣದಲ್ಲಿ 'ವಿಶ್ವ ಸ್ಕಿಜೋಫ್ರೆನಿಯಾ ದಿನಾಚರಣೆ' ಕಾರ್ಯಕ್ರಮ

# ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡಿ

■ವಿಜಯಸಾಕ್ಷಿ ಸುದ್ದಿ, ಧಾರವಾಡ

ಮಾನಸಿಕ ಕಾಯಿಲೆಗಳ ಬಗ್ಗೆ ಮನೋವೈದ್ಯರ ಬಳಿ ಚರ್ಚಿಸಿ, ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕು. ಸಾರ್ವಜನಿಕರು ಇಂದಿನ ದಿನಮಾನಗಳಲ್ಲಿ ಮಾನಸಿಕ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಮತ್ತು ಒಳ್ಳೆಯ ಹವ್ಯಾಸಗಳನ್ನು ಅನುಸರಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪರಶುರಾಮ ಎಫ್.ದೊಡ್ಡಮನಿ ಹೇಳಿದರು.

ಅವರು ಶುಕ್ರವಾರ ನಗರದ ಡಿಮ್ಹಾನ್ಸ್ ಸಂಸ್ಥೆಯ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಧಾರವಾಡ ವಕೀಲರ ಸಂಘ, ಜಿಲ್ಲಾ ಆಡಳಿತ ಮತ್ತು ಜಿಲ್ಲಾ ಪಂಚಾಯತ, ಧಾರವಾಡ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಸಂಸ್ಥೆ (ಡಿಮ್ಹಾನ್ಸ್), ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ 'ವಿಶ್ವ ಸ್ಕಿಜೋಫ್ರೆನಿಯಾ ದಿನಾಚರಣೆ'ಯ ಅಂಗವಾಗಿ ಆಯೋಜಿಸಿದ ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಬೆಳಗಾವಿ ಮತ್ತು ಕಲಬುರಗಿಯ ಮಾನಸಿಕ ಆರೋಗ್ಯ ವಿಮರ್ಶಾ ಮಂಡಳಿ ಅಧ್ಯಕ್ಷರು ಹಾಗೂ ನಿವೃತ್ತ ಜಿಲ್ಲಾ ನ್ಯಾಯಾಧೀಶ ಡಿ.ಆರ್. ರೇಣಕೆ ಮಾತನಾಡಿ, ಸ್ಕಿಜೋಫ್ರೆನಿಯಾ ಒಂದು ಮಾನಸಿಕ ಕಾಯಿಲೆಯಾಗಿದ್ದು, ಇದು ಸುಮಾರು 300 ಜನರಲ್ಲಿ ಒಬ್ಬರಿಗೆ ಕಂಡು ಬರುತ್ತದೆ. ಈ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳು ಗುಣಮುಖರಾಗುವದು ಅತೀ ವಿರಳವಾಗಿದೆ ಎಂದರಲ್ಲದೆ, ಮಾನಸಿಕ ಆರೋಗ್ಯ ಕಾಳಜಿ ಕಾಯಿದೆ 2017ರ ಮಹತ್ವದ ಬಗ್ಗೆ ಅವರು ತಿಳಿಸಿದರು.

ಜೆ.ಎಸ್.ಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಮತ್ತು ಎಸ್.ವಿ.ವಾಯ್.ಎಮ್ ನಿರ್ವಹಣಾ ಸಮಿತಿ ಸದಸ್ಯ ಡಾ. ಎಸ್.ಎನ್. ಹೆಗಡೆ, ಅಧ್ಯಕ್ಷತೆ ವಹಿಸಿದ್ದ ಡಿಮ್ಹಾನ್ಸ್ ನಿರ್ದೇಶಕ ಡಾ. ಅರುಣಕುಮಾರ ಸಿ ಮಾತನಾಡಿದರು.

ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ. ಮಹೇಶ ಚಿತ್ತರಗಿ, ಜಿಲ್ಲಾ ಸಮೀಕ್ಷಣಾ ಅಧಿಕಾರಿ ಡಾ. ಪರಶುರಾಮ ಎಫ್.ಕೆ., ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಮಂಜುನಾಥ, ಜಿಲ್ಲಾ ಕ್ಷಯರೋಗ ನಿಯಂತ್ರಣ ಅಧಿಕಾರಿ ಡಾ. ರವೀಂದ್ರ ಬೊವೇರ, ತಾಲೂಕಾ ಆರೋಗ್ಯಾಧಿಕಾರಿ ಡಾ. ತನುಜಾ ಕೆ.ಎನ್., ಧಾರವಾಡ ಜಿಲ್ಲಾ ವಕೀಲರ ಸಂಘ ಅಧ್ಯಕ್ಷ ಅಶೋಕ ಏಣಗಿ, ಜಿಲ್ಲಾ ಐ.ಇ.ಸಿ ಅಧಿಕಾರಿ ಬಿ.ಆರ್. ಪಾತ್ರೋಶ, ಜಿಲ್ಲಾ ಮನೋವೈದ್ಯ ತಜ್ಞರಾದ ಡಾ.ಆದಿತ್ಯ ಪಾಂಡುರಂಗಿ, ಡಾ. ಸ್ವಪ್ನಪಾಂಡುರಂಗಿ, ಡಾ.ರಂಗನಾಥ, ಡಾ. ಮಂಜುನಾಥ ಭಜಂತ್ರಿ ಉಪಸ್ಥಿತರಿದ್ದರು.

ಡಿಮ್ಹಾನ್ಸ್ ಸಂಸ್ಥೆಯ ಡಾ. ಸುನಂದಾ ಜಿ.ಟಿ ನಿರೂಪಿಸಿದರು. ನರ್ಸಿಂಗ್ ಅಧಿಕಾರಿ ಹನುಮಂತ ಮೂದೆಗೊಳ ಸ್ವಾಗತಿಸಿದರು. ಡಿಮ್ಹಾನ್ಸ್ ಸಂಸ್ಥೆಯ ಮನೋವೈದ್ಯಕೀಯ ಸಾಮಾಜಿಕ ಕಾರ್ಯಕರ್ತ ಡಾ. ಅಶೋಕ ಕೋರಿ ವಂದಿಸಿದರು.

## ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಿಲಾಂಜೆ-2024

# ವಿದ್ಯಾರ್ಥಿಗಳು ತಂತ್ರಜ್ಞಾನಕ್ಕೆ ಹೊಂದಿಕೊಳ್ಳಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ನಮ್ಮ ಭವಿಷ್ಯದ ರೂವಾರಿಗಳು ನಾವೇ ಆಗಿದ್ದು, ಉನ್ನತ ಗುರಿ, ಪರಿಶ್ರಮ, ಸತತ ಅಭ್ಯಾಸ, ಶ್ರದ್ಧೆ, ಪ್ರಾಮಾಣಿಕತೆಯಿಂದ ಸಾಗಿದಾಗ ಯಶಸ್ಸು ಸಾಧ್ಯವಾಗುತ್ತದೆ ಎಂದು ಹುಬ್ಬಳ್ಳಿಯ ಸೇಫ್ ಹ್ಯಾಂಡ್ಸ್ ಕಂಪನಿಯ ಸಂಸ್ಥಾಪಕಿ ಶ್ರಾವಣಿ ಪವಾರ ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಪಟ್ಟಣದ ಶ್ರೀಮತಿ ಕಮಲಾ ವೆಂಕಪ್ಪ ಎಂ.ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜರುಗುತ್ತಿರುವ ಮಿಲಾಂಜೆ-2024ರ ರಾಷ್ಟ್ರೀಯ ತಂತ್ರಜ್ಞಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತ ಂ ತ ್ರ ಜ ್ಞಾ ನ ಬ ದ ಲಾ ವ ಣೆ ಯಾ ದ ಂ ತೆ ಇಂದಿನ ವಿದ್ಯಾರ್ಥಿಗಳು ಅದಕ್ಕೆ ಹೊಂದಿಕೊಂಡು ಸಾಗಬೇಕು. ಈಗಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಆಯ್ದುಕೊಂಡ ಕ್ಷೇತ್ರದಲ್ಲಿ ಶ್ರೇಷ್ಠವಾದುದನ್ನು ಸಾಧಿಸಲು ಸ್ವತಂತ್ರ ಮನೋಭಾವ, ಕ್ರಿಯಾತ್ಮಕತೆ, ಏಕಾಗ್ರತೆ ರೂಢಿಸಿಕೊಳ್ಳಬೇಕು. ಉನ್ನತ ಶಿಕ್ಷಣ, ಜ್ಞಾನ ಮತ್ತು ನಾಯಕತ್ವದ ಗುಣ ಬೆಳೆಸಿಕೊಂಡು ಸಮಾಜಮುಖಿಯಾಗಿ ದೇಶದ ಅಭಿವೃದ್ಧಿಗೆ ಕೈ ಜೋಡಿಸಬೇಕು. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ತಂತ್ರಜ್ಞಾನ, ಹೊಸ ಅವಿಷ್ಕಾರಗಳ ಕಲ್ಪನೆ ಮತ್ತು ಇಂಗ್ಲೀಷ್ ಭಾಷೆಯ ಜ್ಞಾನ ಅಗತ್ಯವಾಗಿದ್ದು, ಪರಸ್ಪರ ಭಾಷಾ ಸಂವಹನದ ಮೂಲಕ ಭಾಷೆಯ ಜ್ಞಾನ ಹೊಂದಬೇಕು ಎಂದರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಪರಶುರಾಮ ಬಾರ್ಕಿ ವಹಿಸಿದ್ದರು. ಕೋಡ್ ಬಜ್, ಟಗ್ ಆಫ್ ವಾರ್, ಬ್ಲೈಂಡ್ ಕೋಡಿಂಗ್, ಆರ್ಟ್ ಮೇನಿಯಾ, ರೋಬೋ ರೇಸ್ ಸ್ಪರ್ಧೆಗಳು ನಡೆದವು. ಕಾಲೇಜಿನ ವಿದ್ಯಾರ್ಥಿಗಳು ತಂತ್ರಜ್ಞಾನ ಆಧಾರಿತ ವಿಷಯಗಳ ಬಗ್ಗೆ ಪ್ರಬಂಧ ಮಂಡನೆ ಮಾಡಿದರು. ವೇದಿಕೆಯಲ್ಲಿ ಡಾ. ಸುಭಾಷ ಮೇಟಿ, ಡಾ. ಗಿರೀಶ ಯತ್ತಿನಹಳ್ಳಿ ಮತ್ತಿತರಿದ್ದರು. ಪ್ರೊ ರಾಜೇಶ್ವರಿ ಗಾಮನಗಟ್ಟಿ, ರಕ್ಷಿತಾ ಕುಂದಗೋಳ, ಪ್ರಿಯಾಂಕ ಪಾಟೀಲ, ಪ್ರೊ ರಾಜೇಂದ್ರ ಶೆಟ್ಟರ ನಿರೂಪಿಸಿದರು.

## ಶ್ರೀರಾಮ ಸೇನೆಯಿಂದ ಉಪನೋಂದಣಾಧಿಕಾರಿಗಳಿಗೆ ಮನವಿ ಸಲ್ಲಿಕೆ

# ಅಂತರ ಧರ್ಮದ ವಿವಾಹಗಳ ದಾಖಲೆ ಪರಿಶೀಲಿಸಿ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಉಪನೋಂದಣಿ ಕಚೇರಿಯಲ್ಲಿ ದಾಖಲೆಗಳನ್ನು ಪರಿಶೀಲಿಸದೆ ಅಂತರ ಧರ್ಮದ ವಿವಾಹಗಳು ನಡೆಯುತ್ತಿದ್ದು, ಇದಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹಿಸಿ ಶ್ರೀರಾಮ ಸೇನಾ ತಾಲೂಕು ಘಟಕದ ವತಿಯಿಂದ ಉಪನೋಂದಣಾಧಿಕಾರಿ ಎಸ್. ಕೆ. ಜಲರಡ್ಡಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಶ್ರೀರಾಮ ಸೇನಾ ತಾಲೂಕು ಸಂಚಾಲಕ ಈರಣ್ಣ ಪೂಜಾರ, ಯುವ ಮುಖಂಡ ಬಸವರಾಜ ಚಕ್ರಸಾಲಿ ಮಾತನಾಡಿ, ಇತ್ತೀಚೆಗೆ ಅಂತರ ಧರ್ಮದ ವಿವಾಹವು ಕೋಮು ಸ್ವರೂಪ ಪಡೆಯುತ್ತಿದ್ದು,




ಗಲಭೆಗಳಿಂದ ಸಾಮರಸ್ಯ ಹಾಳುಗೆಡುತ್ತಿರುವ ಘಟನೆಗಳು ರಾಜ್ಯದಲ್ಲಿ ನಡೆಯುತ್ತಿವೆ. ಉಪನೋಂದಣಿ ಕಚೇರಿಯಲ್ಲಿ ವಿವಾಹ ನೋಂದಣಿಗೆ ಬರುವವರ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೆ ವಿವಾಹಗಳ ನೋಂದಣಿ ನಡೆಯುತ್ತಿರುವದು ಕಂಡು ಬಂದಿದೆ. ವಿವಾಹ ದಾಖಲೆಯ ಒಂದು ಪ್ರತಿಯನ್ನು ನೋಟೀಸ್ ಬೋರ್ಡ್‌ಗೆ ಲಗತ್ತಿಸದೆ ಅಧಿಕಾರಿಗಳು ಬೇಜವಾಬ್ದಾರಿ ತೋರುತ್ತಿದ್ದಾರೆ ಎಂದು ಆರೋಪಿಸಿದರು.

ಅಧಿಕಾರಿಗಳ ನಿರ್ಲಕ್ಷ್ಯದಿಂದ ಲವ್ ಜಿಹಾದ್‌ನಂತಹ ಪ್ರಕರಣಗಳು ಹೆಚ್ಚುತ್ತಿದ್ದು, ಸಬ್ ರಜಿಸ್ಟ್ರಾರ್ ಕಚೇರಿಯಲ್ಲಿ ಮತಾಂತರ ತಡೆ-2022 ಕಾಯ್ದೆ ಸೇರಿದಂತೆ ಯಾವುದೇ ಕಾನೂನಿನ ಲೋಪಗಳು ಜರುಗದಂತೆ ಅಧಿಕಾರಿಗಳು ಜಾಗ್ರತೆ ವಹಿಸಬೇಕು ಎಂದರು.

ಮನವಿ ಸ್ವೀಕರಿಸಿದ ಉಪನೋಂದಣಾಧಿಕಾರಿ ಎಸ್.ಕೆ. ಜಲರಡ್ಡಿ ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳುವದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ನವೀನ ಬೆಳ್ಳಟ್ಟಿ, ರಾಮು ಪೂಜಾರ, ಅರುಣ ಮೆಕ್ಕಿ, ಮಂಜುನಾಥ ಕೊಡಳ್ಳಿ, ರಾಘು ಪುರೋಹಿತ, ಪ್ರಕಾಶ ಕಮಡೊಳ್ಳಿ, ಅರುಣ ಗೋಡಿ, ಕಿರಣ ಚಿಲ್ಲೂರಮಠ, ಅಮಿತ ಗುಡಗೇರಿ, ಮುತ್ತು ಕರ್ಜಕಣ್ಣನವರ, ಹರೀಶ ಕಟ್ಟಿಮನಿ, ಸಾಗರ ಅಳ್ಳಳ್ಳಿ, ಆದೇಶ ಸವಣೂರ, ಚಿನ್ನು ಹಾಳದೋಟದ, ವಿನಯ ಉಮಚಗಿ, ಪ್ರವೀಣ ಕುಂಬಾರ, ಹನುಮಂತ ರಾಮಗೇರಿ ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

## ಸಂಪಾದಕೀಯ

# ಬೆಳೆ ವಿಮೆ ಎಂಬ ಮೋಸದ ಜಾಲ

ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆಯಿಂದಾಗಿ ರೈತ ಸಮೂಹ ಹರ್ಷಗೊಂಡಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಹೆಸರು ಬಿತ್ತನೆ ಆರಂಭವೂ ಆಗಿದೆ. ಜೂನ್ ಮೊದಲ ವಾರದಲ್ಲಿ ರಾಜ್ಯಕ್ಕೆ ಮುಂಗಾರು ಪ್ರವೇಶಿಸಲಿದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಈ ಮಧ್ಯೆ ಮುಂಗಾರು ಬೆಳೆಗಳಿಗೆ ವಿಮೆ ಪಾವತಿಸುವ ಪ್ರಕ್ರಿಯೆಯು ಆರಂಭಗೊಂಡಿದೆ. ಯಾವ ಬೆಳೆಗೆ ಎಷ್ಟು ವಿಮೆ ಪಾವತಿಸಬೇಕು ಎನ್ನುವ ಪಟ್ಟಿ ಬಿಡುಗಡೆ ಆಗಿದೆ. ಬಿತ್ತನೆಗೂ ಮುನ್ನವೇ ವಿಮೆ ಕಟ್ಟ ಬೇಕಾದಂತಹ ಅನಿವಾರ್ಯತೆ ರೈತ ಸಮೂಹಕ್ಕೆ ಎದುರಾಗಿದೆ.

ಮುಂಗಾರು ಬಿತ್ತನೆಗೆ ಬೇಕಾದ ಬೀಜ, ರಸಗೊಬ್ಬರ ಖರೀದಿಗೆ ಹೆಣಗಾಡುತ್ತಿರುವ ಬಡ ರೈತರು, ಬೀಜ ಖರೀದಿಸಬೇಕು ಅಥವಾ ಮೊದಲು ವಿಮೆ ಪಾವತಿಸಿ ಬಿತ್ತನೆ ಮಾಡಬೇಕು ಎನ್ನುವ ಗೊಂದಲಕ್ಕೆ ಸಿಲುಕುವಂತಾಗಿದೆ.

ಬೆಳೆ ವಿಮೆ ಎನ್ನುವುದು ಮೋಸದ ಜಾಲವಾಗಿದೆ. ರೈತರು ತಾವು ಬಿತ್ತಿದ ಬೆಳೆಗೆ ವಿಮೆ ಪಾವತಿಸಿದರೆ ಬೆಳೆ ನಷ್ಟವಾದರೂ ಪರಿಹಾರ ಬರುವುದು ಅಷ್ಟಕಷ್ಟೇ. ವಿಮಾ ಕಂಪನಿಗಳ ಷರತ್ತುಗಳು ಆ ರೀತಿಯಾಗಿವೆ.

ಸಾಮಾನ್ಯವಾಗಿ ಬಹಳಷ್ಟು ರೈತರು ಬೆಳೆದ ಬೆಳೆ ಹಾನಿಯಾದರೂ ವಿಮೆ ಬರುವುದಿಲ್ಲ. ಕಡಿಮೆ ಪ್ರಮಾಣದಲ್ಲಿ ಬಿತ್ತನೆಯಾದ ಬೆಳೆಗೆ ವಿಮೆ ಹೆಚ್ಚು ಬಂದಿರುವ ಅನೇಕ ಉದಾಹರಣೆಗಳಿವೆ.

ವಿಮಾ ಕಂಪನಿಗಳು ನಿರಂತರವಾಗಿ ಈ ರೀತಿ ಶೋಷಣೆ ಮಾಡುತ್ತಿದ್ದರು ಯಾವುದೇ ಸರ್ಕಾರಗಳು ಅವುಗಳ ವಿರುದ್ಧ ಕ್ರಮ ಕೈಗೊಳ್ಳಲಿಲ್ಲ. ಹಿಂದಿನ ಬಿಜೆಪಿ ಸರ್ಕಾರದಿಂದ ಈಗಿನ ಕಾಂಗ್ರೆಸ್ ಸರ್ಕಾರದವರೆಗೂ ಜಿಲ್ಲಾವಾರೋ ಭೀಮಾ ಕಂಪನಿಗಳು ರೈತರನ್ನ ವಂಚಿಸಿ ಕೋಟಿ ಕೋಟಿ ರೂಪಾಯಿ ಲಾಭ ಮಾಡಿಕೊಳ್ಳುತ್ತಿವೆ. ಆದರೆ ನಷ್ಟ ಅನುಭವಿಸಿದ ರೈತರಿಗೆ ನಯಾ ಪೈಸೆ ಕೂಡ ದೊರೆಯುತ್ತಿಲ್ಲ.


ಸರಕಾರ ಬೆಳೆ ವಿಮೆ ಯೋಜನೆ ಖಾಸಗಿ ವಿಮೆ ಕಂಪನಿಗಳಿಗೆ ವಹಿಸದೆ ಸರ್ಕಾರವೇ ಅದನ್ನ ಮುನ್ನಡೆಸುವಂತೆ ಆಗಬೇಕು. ಅಥವಾ ಷರತ್ತುಗಳನ್ನು ರೈತರೇ ನಿರ್ಧರಿಸುವಂತೆ ಆಗಬೇಕು. ಅಂದಾಗ ಮಾತ್ರ ಬೆಳೆವಿಮೆಯಿಂದ ರೈತರಿಗೆ ಅನುಕೂಲಕರವಾಗಲಿದೆ.

## ನಗುಮುಖದ, ಕನ್ನಡ ಮಾತಿನ ವಿಶಿಷ್ಟತೆಯಿಂದ ಜನರಿಗೆ ಹತ್ತಿರವಾದ ಸಾಹಿತಿ

# ಪದಗಾರುಡಿಗ ಪ್ರೊ. ಉಮೇಶ ಅಂಗಡಿ

ಬದುಕು ತೋರಿಕೆಯಾಗಬಾರದು, ಪ್ರದರ್ಶನವಾಗಬಾರದು. ಅದು ಪೂಜೆಯಾದರೂ ಸರಿ, ನಾವು ಮಾಡುವ ಕೆಲಸವಾದರೂ ಸರಿ. ಯಾರ ಹೊಗಳಿಕೆ, ಮೆಚ್ಚುಗೆ ನಮ್ಮ ಗಣನೆಗೆ ಬರಬಾರದು. 'ತಾನಿಲ್ಲದ ಮಾಟ'ದಲ್ಲಿ ತುಂಬಿಕೊಂಡಿರುವುದು ಸಮಷ್ಟಿಯ ಪ್ರಜ್ಞೆ, ಅದೇ ದೇವರು. ಆ ಭಾವದ ಮುಂದೆ 'ನಾನು' ಎಂಬುದು ಅರ್ಥ ಕಳೆದುಕೊಳ್ಳುತ್ತದೆ. ಇದು ಪದಗಾರುಡಿಗ ಪ್ರೊ. ಉಮೇಶ ಅಂಗಡಿಯವರ ಜೀವನಕ್ಕೆ ತಕ್ಕನಾದ ಮಾತು. ಮಾಡಿಯೂ ಮಾಡದಂತಿದ್ದಾರೆ. ನೋಡುವವರ ದೃಷ್ಟಿಯಲ್ಲಿ ಅವರ ಸಾಧನೆಗಳಿಗೆ ಬರವೇ ಇಲ್ಲ. ಅವರ ಸಾಧನೆ, ವೈಚಾರಿಕತೆ ಎಲ್ಲವೂ ಅರ್ಥವಾಗುವುದು ಅವರನ್ನು ಆಳವಾಗಿ ಒಳಹೊಕ್ಕು ನೋಡಿದವರಿಗೆ ಮಾತ್ರ.

ಗದುಗಿನ ಸುತ್ತಮುತ್ತಲ ಸಾಹಿತ್ಯ ಸಹಚಾರದ ಜನಗಳಿಗೆ ಅದೂ 70–90ರ ದಶಕದ ಜನರಿಗೆ ಪ್ರೊ. ಉಮೇಶ ಅಂಗಡಿ ಹೆಸರು ಚಿರಪರಿಚಿತ. ತಮ್ಮ ನಗುಮುಖದ ಮತ್ತು ಕನ್ನಡ ಮಾತಿನ ವಿಶಿಷ್ಟತೆಯಿಂದಾಗಿಯೇ ಅವರು ಜನರಿಗೆ ಹತ್ತಿರ. ಪ್ರೊ. ಉಮೇಶ ಅಂಗಡಿ,



ಹುಟ್ಟಿದ್ದು 23 ಜೂನ್ 1944ರಲ್ಲಿ, ಗದುಗಿನಲ್ಲಿ. ತಂದೆ ಶರಣಕವಿ ಅಂಗಡಿ ಕರವೀರಪ್ಪನವರು, ತಾಯಿ ಚೆನ್ನಮ್ಮ. 1960ರಿಂದ ಕವನ, ಕಥೆ, ಕಾದಂಬರಿಯ ರಚನೆಯಲ್ಲಿ ತೊಡಗಿ–ಕೊಂಡರು. 1972ರಿಂದ ಪ್ರಬಂಧ ಮತ್ತು ವಿಮರ್ಶೆ–ವಿವೇಚನೆಗಳ ರಚನೆಯಲ್ಲಿ ತೊಡಗಿಕೊಂಡರು.

ತಾವು ಕಲಿತ ಜೆ.ಟಿ ಕಾಲೇಜಿನಲ್ಲಿಯೇ 1972ರಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಪ್ರಾರಂಭಿಸಿದರು. ಅವರನ್ನು ಕನ್ನಡದ ರಸಋಷಿ ಎಂದರೂ ತಪ್ಪಾಗಲಾರದು. ಕನ್ನಡ ಭಾಷೆಯ ಮೇಲೆ ವಿಶಿಷ್ಠ ಪ್ರಭುತ್ವ ಹೊಂದಿದವರು. ಕನ್ನಡ ಶಬ್ದಗಳ ಮೇಲಿನ ಹಿಡಿತ ಅವರ ಸಹಜ ಮಾತುಗಳಲ್ಲೇ ಅಭಿವ್ಯಕ್ತಗೊಳ್ಳುತ್ತಿತ್ತು. ಮಾತು ಕಾವ್ಯಾವಾಗಿರುತ್ತಿತ್ತು. ಅದರ ಗಂಧವಿಲ್ಲದವರಿಗೆ ಕೆಲವೊಮ್ಮೆ ಅವರ ಮಾತುಗಳು ನಿಲುಕುತ್ತಿರಲಿಲ್ಲ.

ಜಿ. ಕಲಾನಂದ ಎನ್ನುವ ಕಾವ್ಯ ನಾಮದಡಿ ಮೊದಲು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡ ಅವರು ಮೊದಲು ಪ್ರಗತಿಶೀಲ ನೆಲೆಗಳಲ್ಲಿ ಬರವಣಿಗೆಯನ್ನು ಪ್ರಾರಂಭಿಸಿದರೂ ಆನಂತರ ನವೋದಯ, ನವ್ಯ, ಬಂಡಾಯದ ಸಂವೇದನೆಗಳಿಗೂ ಸಂದಿಸುತ್ತಾರೆ. ಕನ್ನಡದ ಶಬ್ದ ಮಾಂತ್ರಿಕ, ಶಬ್ದ ಗಾರುಡಿಗ ಎಂದೇ ತಮ್ಮನ್ನು ಗುರುತಿಸಿಕೊಂಡ ಅವರು ಹಲವಾರು ಕೃತಿಗಳನ್ನು ಬರೆದಿದ್ದಾರೆ. ಕೆಲವು ಮಾತ್ರ ಪ್ರಕಟಣೆಗೊಂಡಿದ್ದು ವಿಧಿಯ ವಿಪರ್ಯಾಸ. ಅವರ ಬದುಕೇ ಬರಹವಾಗಿತ್ತು. ಕೊನೆಯ ಕ್ಷಣದವರೆಗೂ ಅವರು ಪೆನ್ನು ಮತ್ತು ಪುಸ್ತಕಗಳಲ್ಲಿಯೇ ತನ್ನನ್ನು ತೊಡಗಿಸಿಕೊಂಡಿದ್ದರು.

ಭಾರತಿಗೆ ರಕ್ತದಾರತಿ, ದಿಗಂಬರ, ಹೊಸಮುಖ, ಕಾವ್ಯಸಂಗಮ ಎನ್ನುವ ಪ್ರಾತಿನಿಧಿಕ ಕವನ ಸಂಕಲನಗಳ ರಚನೆ, ಮಾರುಕಟ್ಟೆಯಲ್ಲಿ, ಅಷ್ಟೇ ಸಮಾಧಾನ, ಸಿರಿಶ್ರುಂಗ, ಬಿತ್ತಿ ಬೆಳೆದವರು, ಹತ್ತಿಪ್ಪತ್ತು, ಕಾಯಕನಿಯತರು, ಬಗೆಗಣ್ಣ ನಗೆ ಚಲುವ ಅವರ ಕವನ ಸಂಕನಗಳು. ನೆನಪಿನಂಗಳ, ಕನ್ನಡ ಸಂಸ್ಕೃತಿ, ನುಡಿನೋಟ ಎನ್ನುವ ಗದ್ಯ ಸಂಕಲನಗಳನ್ನು ಮತ್ತು ಬಿಡಿ ಬಿಡಿಯಾದ ನೂರಾರು ಚಿಂತನ ಪ್ರಬಂಧಗಳನ್ನು ಬರೆದಿದ್ದಾರೆ.

ಡಾ. ಡಿ.ಎಸ್. ಕರ್ಕಿಯವರ ಕುರಿತು ಅವರ ಅಪೂರ್ಣ ಮಹಾಪ್ರಬಂಧ ಇದೀಗ ಕೃತಿಯಾಗಿ ರೂಪ ಪಡೆದುಕೊಳ್ಳುತ್ತಿದೆ. ಅದರಲ್ಲಿ ಕರ್ಕಿಯವರ ನಮನ, ಕರ್ಕಿಯವರ ವಚನ ಚಿಂತನೆ, ಕರ್ಕಿಯವರ ತನನ ತೋಂ, ಕರ್ಕಿಯವರ ಬಣ್ಣದ ಚಂಡು, ನಮನ– ಕರ್ಕಿಯವರ ಪ್ರಾರ್ಥನಾ ಗೀತೆಗಳ ಚಿಂತನೆ, ಕಾವ್ಯಸೌರಭ, ಕರ್ಕಿ ಕಾವ್ಯ ಮೀಮಾಂಸೆ, ಕರ್ಕಿ ಕಂಡ ಪ್ರಕೃತಿ, ಕರ್ಕಿಯವರ ದೇಶಪ್ರೇಮ, ಕರ್ಕಿ ಕಥನ ಕವನಗಳು ಅದ್ಭುತವಾದ ಬರಹಗಳು.

ಈ ಮೊದಲು ಸಾಹಿತ್ಯರಶ್ಮಿ ಪ್ರಕಾಶನದಿಂದ ಅವರ ಅಷ್ಟೇ ಸಮಾಧಾನ, ಬಿತ್ತಿಬೆಳೆದವರು, ಹತ್ತಿಪ್ಪತ್ತು, ಕಾಯಕನಿಯತರು, ಕೃತಿಗಳನ್ನು ಮತ್ತು ಅವರ ಅಭಿನಂದನಾ ಕೃತಿ 'ವಜ್ರಮುಷ್ಠಿ–75' ಅನ್ನು ಪ್ರಕಟಿಸಲಾಗಿತ್ತು. ಈ ಸಲ ಅವರ ಒಟ್ಟು 10 ಭಾವಗೀತೆಗಳನ್ನು ಸಂಗೀತಕ್ಕೆ ಒಳಪಡಿಸುವ ಕಾರ್ಯಕ್ಕೆ ಮುಂದಾಗಿದ್ದೇವೆ. ಅದರ ಆರಂಭಿಕ ಹಂತವಾಗಿ ಅವರ ಎರಡು ಭಾವಗೀತೆಗಳನ್ನು ಇಂದು ಇಲ್ಲಿ 'ಸಾಹಿತ್ಯರಶ್ಮಿ' ಎನ್ನುವ ಯುಟ್ಯೂಬ್ ಮೂಲಕ ಬಿಡುಗಡೆ ಮಾಡಲಾಗುತ್ತದೆ. ಅವರು ಏನನ್ನೂ ಬಯಸಿರಲಿಲ್ಲ. ಇದು ನಮ್ಮ ಆತ್ಮತೃಪ್ತಿಯ ಕೆಲಸವಷ್ಟೇ.

ಒಟ್ಟಾರೆಯಾಗಿ ಜನ ಕೇಳುತ್ತಾರೆ ಅವರು ಏನನ್ನು ಕೊಟ್ಟು ಹೋದರು ಸಮಾಜಕ್ಕೆ? ಇದಕ್ಕೆ ಉತ್ತರವಾಗಿ ಅವರು 'ಸಾಹಿತ್ಯರಶ್ಮಿ ಪ್ರಕಾಶನ' ಎನ್ನುವ ಪ್ರಕಾಶನ ಸಂಸ್ಥೆಯನ್ನು, 'ಹಷ9 ಗ್ರಾಫಿಕ್ಸ್' ಪುಸ್ತಕ ಮಳಿಗೆಯನ್ನು ಹುಟ್ಟು ಹಾಕಿದರು. ಆ ಮೂಲಕ ಸದ್ದಿಲ್ಲದೇ ಕನ್ನಡದ ಕೆಲಸವನ್ನು ಮಾಡಿದರು. ಸಂತೃಪ್ತಿ ಮತ್ತು ಸಂಮೃದ್ಧಿ ಎನ್ನುವ ಮನೆಗಳನ್ನು ಮತ್ತು ಅವರ ನಡುವಿನ ಮನಗಳನ್ನು ಕಟ್ಟಿಕೊಟ್ಟರು. ಇದು ಪದ ಗಾರುಡಿಗ ಪ್ರೊ. ಉಮೇಶ ಅಂಗಡಿ.

**– ಡಾ. ರಶ್ಮಿ ಅಂಗಡಿ.**
**ಅಧ್ಯಕ್ಷರು, ತಾಲೂಕಾ**
**ಕ.ಸಾ.ಪ–ಗದಗ.**

## ಡಾ. ವೀರಣ್ಣ ರಾಜೂರ ಅವರಿಗೆ 'ರಾಜೋಜ' ಪ್ರಶಸ್ತಿ ವಿತರಣೆಯ ನಿಮಿತ್ತ ಲೇಖನ

# ಸಾಹಿತ್ಯದಲ್ಲಿ ಮಾಗಿದ ಅನುಭವದ ಗಣಿ

ನಾಡಿನ ಹೆಸರಾಂತ ಸಂಶೋಧಕ, ವಚನ ಸಾಹಿತ್ಯದ ಸಂರಕ್ಷಕ, ಮಹಾಮಾರ್ಗದ ಪಥಿಕ, ಹುತಾತ್ಮ ಡಾ. ಎಂ.ಎಂ. ಕಲಬುರ್ಗಿ ಇವರು ಡಾ. ವೀರಣ್ಣ ರಾಜೂರ ಅವರನ್ನು 'ನನ್ನ ಸಮರ್ಥ ಉತ್ತರಾಧಿಕಾರಿ' ಎಂದು ಹೆಮ್ಮೆಯಿಂದ ಹಲವು ಸಂದರ್ಭಗಳಲ್ಲಿ ಹೇಳಿದ್ದುಂಟು. ಒಬ್ಬ ಹೆಸರಾಂತ ಸಂಶೋಧಕ, ಇನ್ನೊಬ್ಬ ಸಂಶೋಧಕ ಶಿಷ್ಯನನ್ನು ಹೆಮ್ಮೆಯಿಂದ ಹೀಗೆ ಸಂಬೋಧಿಸುತ್ತಿರುವುದು, ಅವರ ಹಿರಿಮೆ–ಗರಿಮೆಗೆ ಸಾಕ್ಷಿಯಾಗಿದೆ. ಇವರು ಕಲಬುರ್ಗಿಯವರ ಗರಡಿಯಲ್ಲಿ ಕನ್ನಡ ಸಾಹಿತ್ಯದ ಸಂಶೋಧನಾ ಕ್ಷೇತ್ರದಲ್ಲಿ ಪಳಗಿದ ಅಪರೂಪದ ವಿದ್ವಾಂಸರು. ನಟ, ನಾಟಕಕರ್ತೃ, ಸೃಜನ–ಸೃಜನೇತರ ಸಾಹಿತ್ಯದಲ್ಲಿ ಮಾಗಿದ ಅನುಭವದ ಗಣಿಯಾದವರೇ ಡಾ. ವೀರಣ್ಣ ರಾಜೂರ. ಇವರು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಪ್ರಾಧ್ಯಾಪಕರು. ಈ ಅವಧಿಯಲ್ಲಿ ಕನ್ನಡ ಅಧ್ಯಯನ ಪೀಠದ ಅಧ್ಯಕ್ಷರಾಗಿ, ಮುರಗೋಡ ಮಹಾಂತ ಶಿವಯೋಗಿಗಳ ಸ್ಮಾರಕ ಬಸವಪೀಠದ ಸಂಯೋಜಕರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕಲಾ ವಿಭಾಗದ



ಡೀನರಾಗಿ ಮತ್ತು ಪ್ರಸಾರಾಂಗದ ನಿರ್ದೇಶಕರಾಗಿ, ವಿಶ್ವವಿದ್ಯಾಲಯದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಮಾಜಮುಖಿ ವಿದ್ವಾಂಸರು.

ಈ ದಿಶೆಯಲ್ಲಿ ಗದುಗಿನ ಶ್ರೀ ತೋಂಟ–ದಾರ್ಯ ಮಠಕ್ಕೆ ಸಲ್ಲಿಸಿದ ಸಾಹಿತ್ಯಿಕ ಕೊಡುಗೆ ಅಪಾರವಾಗಿದೆ. ಅಂದಹಾಗೆ 'ಯಳಮಲಿ ಗುರುಶಾಂತದೇವರ ಸ್ವರವಚನಗಳು, ಶೀಲಸಂಪಾದನೆ, ಭಕ್ತಾನಂದ ಸುಧಾರ್ಣವ, ಬೆಡಗಿನ ವಚನಗಳು, ವಚನಸಾರ, ಎಲ್ಲ ಪುರಾತರ ಸ್ತೋತ್ರದ ವಚನಗಳು' ಹೀಗೆ 50 ಕ್ಕೂ ಹೆಚ್ಚು ಅಪ್ರಕಟಿತ ಸಂಪಾದಿತ ಕೃತಿಗಳು ಶ್ರೀಮಠದಿಂದ ಬಿಡುಗಡೆಗೊಂಡಿರುವುದು ಇವರ ಸಂಶೋಧನಾ ಕ್ಷೇತ್ರಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಡಾ. ಎಂ.ಎಂ. ಕಲಬುರ್ಗಿ ಅವರೊಂದಿಗೆ ಕೆಲಸ ಮಾಡುವುದೆಂದರೆ ಗೌರವ ಹಾಗೂ ಹೆಮ್ಮೆಪಡಲೇಬೇಕು. ಅತ್ಯಂತ ಪರಿಶ್ರಮವಹಿಸಿ ಪಟ್ಟು ಹಿಡಿದು ಕೆಲಸಗಳು ಕೈಗೂಡುವುದನ್ನು ನೋಡಿದಾಗ ಇವರ ಕೈಯಲ್ಲಿ ಕೆಲಸಗಳೇ ದಣಿಯುತ್ತವೆ ಹೊರತು, ಎಂದೂ ಇವರು ದಣಿದಿಲ್ಲ. ಕರ್ನಾಟಕ ಸರಕಾರವು ಡಾ. ಎಂ.ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ತಂದಿರುವ 15 ವಚನ ಸಂಪುಟಗಳಲ್ಲಿ 5 ಸಂಪುಟಗಳನ್ನು ಡಾ. ವೀರಣ್ಣ ರಾಜೂರ ಒಬ್ಬರೇ ಸಂಪಾದಿಸಿದ್ದಾರೆ. ಇದನ್ನು ಹೊರತುಪಡಿಸಿ 126 ಗ್ರಂಥಗಳನ್ನು ರಚಿಸಿದ್ದಾರೆ. ಇದರಲ್ಲಿ 18 ನಾಟಕಗಳು ಇವರಿಂದ ರೂಪುಗೊಂಡಿವೆ. ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಹಾಗೂ ಡಾ. ಎಂ.ಎಂ. ಕಲಬುರ್ಗಿ ಇವರ ಅಣತಿಯಂತೆ ಸಿದ್ಧಲಿಂಗೇಶ್ವರರ ಸಮಗ್ರ ಸಾಹಿತ್ಯವನ್ನು ಸಂಪಾದಿಸಿರುವದು. ಡಾ. ಕಲಬುರ್ಗಿ ಇವರು ಸರಕಾರಕ್ಕೆ ಕ್ರಿಯಾಯೋಜನೆ ಮಾಡಿಕೊಟ್ಟುದರ ಫಲವಾಗಿ ಸರಕಾರದಿಂದ ಸಿದ್ಧಲಿಂಗೇಶ್ವರ ಸಮಗ್ರ 11 ಸಂಪುಟಗಳು ಡಾ.ವೀರಣ್ಣ ರಾಜೂರ ಇವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿವೆ.

ಹೀಗೆ ಸೃಜನ ಮತ್ತು ಸೃಜನೇತರ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿಗೈದಿರುವ ಡಾ. ವೀರಣ್ಣ ರಾಜೂರ ಇವರ ಕುರಿತಾಗಿ ಪಿಎಚ್.ಡಿ ಹಾಗೂ 3 ಎಂ.ಫಿಲ್‌ಗಳು ಮಂಡನೆಯಾಗಿವೆ. ಇವರ ಸಂಶೋಧನಾ ಸಾಧನೆಯನ್ನು ಗಮನಿಸಿದ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಪ್ರೇರಣೆಯ ಹಿನ್ನೆಲೆಯಲ್ಲಿ ಡಾ. ಬಿ.ವಿ.ಶಿರೂರ ಇವರ ಸಂಪಾದಕತ್ವದಲ್ಲಿ 'ರಾಜಮಾರ್ಗ' ಎಂಬ 1100 ಪುಟದ ಬೃಹತ್ ಅಭಿನಂದನಾ ಗ್ರಂಥ ಶ್ರೀಮಠದಿಂದ ಪ್ರಕಟಗೊಂಡಿದೆ. ಇದರೊಂದಿಗೆ ಹತ್ತು–ಹಲವು ಪ್ರಶಸ್ತಿಗಳು ಇವರನ್ನು ಅರಸಿಕೊಂಡು ಬಂದಿವೆ. ಕರ್ನಾಟಕ ಸರ್ಕಾರದಿಂದ 'ರಾಜ್ಯೋತ್ಸವ ಪ್ರಶಸ್ತಿ', ಕಲಬುರ್ಗಿ ಬಸವ ಸಮಿತಿಯಿಂದ 'ಅನುಭವ ಮಂಟಪ ಪ್ರಶಸ್ತಿ', ಅಣ್ಣಿಗೇರಿಯ 'ನಿಂಗಮ್ಮ ಹೂಗಾರ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಸ್ಥಾಪಿಸಿದ 'ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ' ಪ್ರಪ್ರಥಮ ಪುರಸ್ಕಾರವನ್ನು ಡಾ. ವೀರಣ್ಣ ರಾಜೂರ ಇವರಿಗೆ ಕೊಡಮಾಡಿರುವದು ಅತ್ಯಂತ ಸೂಕ್ತವಾದುದು.

ಇವರ ಒಟ್ಟು ವಚನಸಾಹಿತ್ಯ ಹಾಗೂ ಶರಣ ಸಾಹಿತ್ಯ ಸೇವೆಯನ್ನು ಗುರುತಿಸಿ, ಕರ್ನಾಟಕ ಸರಕಾರವು 'ರಾಷ್ಟ್ರೀಯ ಬಸವ ಪುರಸ್ಕಾರ' ಕೊಡಮಾಡಿರುವುದು ಇವರ ವ್ಯಕ್ತಿತ್ವದ ತುರಾಯಿಗೆ ಗರಿಯನ್ನು ಮೂಡಿಸಿದೆ. ಪ್ರಶಸ್ತಿಗಳ ಹಮ್ಮು–ಬಿಮ್ಮಿಲ್ಲದ ಸರಳ, ಸಜ್ಜನ, ಸಾತ್ವಿಕ, ಅಜಾತಶತ್ರು ಶರಣ ಸಾಹಿತಿಗಳಿವರು.

ಪದಗಾರುಡಿಗ ಪ್ರೊ. ಉಮೇಶ ಅಂಗಡಿಯವರ ಸ್ಮರಣಾರ್ಥ 'ರಾಜೋಜ' ಪ್ರಶಸ್ತಿಯನ್ನು ಹೆಸರಾಂತ ವಿದ್ವಾಂಸ ಡಾ. ವೀರಣ್ಣ ರಾಜೂರ ಅವರಿಗೆ ಕೊಡ ಮಾಡುತ್ತಿರುವುದು ಅತ್ಯಂತ ಹೆಮ್ಮೆಯನ್ನುಂಟು ಮಾಡಿದೆ. ಪ್ರೊ. ಉಮೇಶ ಅಂಗಡಿಯವರು ಮತ್ತು ಡಾ. ವೀರಣ್ಣ ರಾಜೂರ ಆತ್ಮೀಯ ಗೆಳೆಯರು. ಒಬ್ಬ ಗೆಳೆಯರ ಹೆಸರಿನ ಪ್ರಶಸ್ತಿಯನ್ನು ಇನ್ನೊಬ್ಬ ಗೆಳೆಯರು ಡಾ. ವೀರಣ್ಣ ರಾಜೂರ ಸ್ವೀಕರಿಸುತ್ತಿರುವುದು ಒಂದು ರೀತಿ ಅವಿನಾಭಾವ ಪ್ರಸಂಗವಾಗಿದೆ. ಇಂತಹ ಔಚಿತ್ಯಪೂರ್ಣ ಸಮಾರಂಭಕ್ಕೆ ಸರ್ವರೂ ಆಗಮಿಸಿ ಸಾಹಿತ್ಯದ ಸವಿಯನ್ನು ಅನುಭವಿಸಲು ವಿನಂತಿ.

**–ಶಿವನಗೌಡ ಗೌಡರ.**

## ಆಯೋಗವು ಯಾರಿಗೂ ಎಚ್ಚರಿಕೆ ನೀಡಿಲ್ಲ, ಯಾವುದೇ ನಿರ್ಬಂಧಗಳನ್ನು ವಿಧಿಸಿಲ್ಲ: ಕಾಂಗ್ರೆಸ್



**■ವಿಜಯಸಾಕ್ಷಿ ಸುದ್ದಿ, ನವದೆಹಲಿ**

ಮತಗಟ್ಟೆಯಲ್ಲಿ ಚಲಾವಣೆಯಾದ ಮತಗಳ ಸಂಖ್ಯೆಯನ್ನು ದಾಖಲಿಸುವ ಫಾರ್ಮ್ 17ಸಿ ಅನ್ನು ಬಹಿರಂಗಪಡಿಸುವ ಪಕ್ಷದ ಬೇಡಿಕೆಯ ಬಗ್ಗೆ ಕೇಂದ್ರ ಚುನಾವಣಾ ಆಯೋಗವನ್ನು (ಇಸಿಐ) ಕಾಂಗ್ರೆಸ್ ಪ್ರಶ್ನಿಸಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾಂಗ್ರೆಸ್ ನಾಯಕ ಅಭಿಷೇಕ್ ಮನು ಸಿಂಘ್ವಿ, "ನಮ್ಮ ದೂರಿನ ಹೊರತಾಗಿಯೂ, ಚುನಾವಣಾ ಆಯೋಗದ ಯಾವುದೇ ದಾಖಲೆಯಲ್ಲಿ ಪ್ರಧಾನಿ ಮತ್ತು ಗೃಹ ಸಚಿವರ ಹೆಸರನ್ನು ಉಲ್ಲೇಖಿಸಿಲ್ಲ.

ಆಯೋಗವು ಯಾರಿಗೂ ಎಚ್ಚರಿಕೆ ನೀಡಿಲ್ಲ, ಯಾವುದೇ ನಿರ್ಬಂಧಗಳನ್ನು ವಿಧಿಸಿಲ್ಲ ಮತ್ತು ಯಾವುದೇ ಆರೋಪಗಳನ್ನು ಮಾಡಿಲ್ಲ.

ಮಾದರಿ ನೀತಿ ಸಂಹಿತೆಯನ್ನು (ಎಂಸಿಸಿ) ಉಲ್ಲಂಘಿಸದಂತೆ ತಮ್ಮ ಸ್ಟಾರ್ ಪ್ರಚಾರಕರಿಗೆ ಹೇಳುವಂತೆ ಎರಡೂ ಪಕ್ಷಗಳ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ" ಎಂದು ಅವರು ಹೇಳಿದರು.

ಚುನಾವಣಾ ಆಯೋಗವು ಡೇಟಾವನ್ನು ಟ್ಯಾಂಪರ್ ಮಾಡಲಾಗುವುದು ಎಂದು ಹೇಳುತ್ತದೆ, ಯಾರಾದರೂ ಫೋಟೋವನ್ನು ಮಾರ್ಫ್ ಮಾಡಬಹುದು.

ಈ ಸಂದರ್ಭದಲ್ಲಿ ಯಾವುದೇ ಡೇಟಾವನ್ನು ಅಪ್ಲೋಡ್ ಮಾಡಲಾಗುವುದಿಲ್ಲ ಎಂದಿದೆ.

ಚುನಾವಣಾ ಆಯೋಗದ ಈ ಉತ್ತರ ಕೇವಲ ತಪ್ಪಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಆದರೆ, ಚುನಾವಣಾ ಆಯೋಗಕ್ಕೆ ಹಣ ಪಾವತಿಸಿ ಯಾರಾದರೂ ಈ ಡೇಟಾವನ್ನು ಪಡೆಯಬಹುದು.

ಅದಕ್ಕಾಗಿಯೇ ಇದು ದುರದೃಷ್ಟಕರ ಮತ್ತು ಚುನಾವಣಾ ಆಯೋಗವು ಏಕಪಕ್ಷೀಯ ಒಲವನ್ನು ಹೊಂದಿದೆ ಎಂಬುದನ್ನು ತೋರಿಸುತ್ತದೆ" ಎಂದು ಸಿಂಘ್ವಿ ಹೇಳಿದರು.

ಎಲ್ಲ ಮತಗಟ್ಟೆಗಳಲ್ಲಿ ಮತದಾರರ ಮತದಾನದ ಕುರಿತು ಅಂತಿಮ ದೃಢೀಕೃತ ಡೇಟಾವನ್ನು ಪ್ರಕಟಿಸಲು ಯಾವುದೇ ಕಾನೂನು ಅರ್ಹತೆ ಅಸ್ತಿತ್ವದಲ್ಲಿಲ್ಲ ಎಂದು ಇಸಿಐ ಮೇ 22 ರಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ, ಫಾರ್ಮ್ 17ಸಿ (ಪ್ರತಿ ಮತಗಟ್ಟೆಯಲ್ಲಿ ಚಲಾವಣೆಯಾದ ಮತಗಳು) ಯಿಂದ ಪಡೆದ ಮತದಾರರ ಮತದಾನದ ಮಾಹಿತಿಯನ್ನು ಬಿಡುಗಡೆ ಮಾಡುವುದರಿಂದ ಮತದಾರರ ಗೊಂದಲಕ್ಕೆ ಕಾರಣವಾಗಬಹುದು. ಏಕೆಂದರೆ, ಇದು ಅಂಚೆ ಮತಪತ್ರಗಳ ಎಣಿಕೆಗಳನ್ನು ಒಳಗೊಂಡಿರುತ್ತದೆ ಎಂದು ಹೇಳಿದೆ ಎಂದರು.

ಫಾರ್ಮ್ 17 ಸಿ ಭಾಗ–ಚಿ ರ ಪ್ರತಿಯನ್ನು ಮತಗಟ್ಟೆಗೆ ನಿಯೋಜಿಸಲಾದ ಅರ್ಹ ಮತದಾರರ ಸಂಖ್ಯೆ, ಮತದಾರರ ನೋಂದಣಿಯಲ್ಲಿ ಮತದಾರರ ಸಂಖ್ಯೆ, ನಿರ್ಧರಿಸಿದ ಮತದಾರರ ಸಂಖ್ಯೆಯನ್ನು ವಿವರವಾಗಿ ಮತಗಟ್ಟೆ ಅಧಿಕಾರಿಗಳು ರಾಜಕೀಯ ಪಕ್ಷಗಳ ಪೋಲಿಂಗ್ ಏಜೆಂಟ್‌ಗಳಿಗೆ ನೀಡುತ್ತಾರೆ.


ತಮ್ಮ ಹಕ್ಕು ಚಲಾಯಿಸದಿರುವುದು ಮತ್ತು ಮತ ಚಲಾಯಿಸಲು ಅನುಮತಿಸದ ಮತದಾರರ ಸಂಖ್ಯೆ. ಇವಿಎಂಗಳ ಪ್ರಕಾರ ದಾಖಲಾದ ಮತಗಳ ಸಂಖ್ಯೆಯನ್ನು ಪ್ರಿಸೈಡಿಂಗ್ ಅಧಿಕಾರಿಯು ನಿರ್ದಿಷ್ಟಪಡಿಸುವ ಅಗತ್ಯವಿದೆ.

ಚುನಾವಣಾ ನಿಯಮಗಳ, 1961 ರ ಸೆಕ್ಷನ್ 49ಎಸ್ ಅಡಿಯಲ್ಲಿ ಅಧಿಕಾರಿಗೆ ರಶೀದಿಯನ್ನು ನೀಡಲು ಪೋಲಿಂಗ್ ಏಜೆಂಟ್‌ಗಳು ಕಡ್ಡಾಯಗೊಳಿಸಲಾಗಿದೆ.

ಇದೇ ಕುರಿತು ಪ್ರಶ್ನೆಗಳನ್ನು ಎತ್ತಿರುವ ಸಿಂಘ್ವಿ, "ಸುಪ್ರೀಂ ಕೋರ್ಟ್‌ನಲ್ಲಿ ನಮೂನೆ 17ಸಿ ಡೇಟಾವನ್ನು ಬಹಿರಂಗಪಡಿಸುವ ಬೇಡಿಕೆ ತುಂಬಾ ಸರಳವಾಗಿದೆ.

ಯಾವ ಮತಗಟ್ಟೆಯಲ್ಲಿ ಯಾವ ಕ್ರಮಸಂಖ್ಯೆ ಇರುವ ಯಂತ್ರ ಅಳವಡಿಸಲಾಗಿದೆ? ಪ್ರತಿ ಯಂತ್ರದಲ್ಲಿ ಎಷ್ಟು ಮತಗಳು ಚಲಾವಣೆಯಾದವು? ಚುನಾವಣಾ ಆಯೋಗವು ಈ ಎಲ್ಲ ವಿಷಯಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಪೋಸ್ಟ್ ಮಾಡಬೇಕು" ಎಂದರು.

# ಹೋರಾಟದಿಂದ ಕಟ್ಟಡ ಕಾರ್ಮಿಕರ ಮಂಡಳಿ ಸ್ಥಾಪನೆ




**■ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪನೆಯಾಗಿರುವುದು ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ನಿರಂತರ ಹೋರಾಟದ ಫಲ ಎಂದು ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ. ಕೆ.ಎಸ್. ಜನಾರ್ಧನ ಹೇಳಿದರು.

ನಗರದಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಕೊಪ್ಪಳ ತಾಲ್ಲೂಕಾ ಪ್ರಥಮ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅನೇಕ ವರ್ಷಗಳಿಂದ ಹೋರಾಟ ಮಾಡಿ ಸರ್ಕಾರದ ಮಟ್ಟದಲ್ಲಿ ಸಭೆಗಳನ್ನು ನಡೆಸಿ, 2007ರಲ್ಲಿ ಕಟ್ಟಡ ಕಾರ್ಮಿಕರ ಮಂಡಳಿ ರಚನೆ ಮಾಡಿಸಿದ ಕೀರ್ತಿ ನಮ್ಮ ಸಂಘಟನೆಗಿದೆ. ಮುಂದೆಯೂ ಕಟ್ಟಡ ಕಾರ್ಮಿಕರ ಸೌಲಭ್ಯಗಳಿಗೆ ಹೋರಾಟದ ಅಗತ್ಯವಿದೆ ಎಂದು ಹೇಳಿದರು.

ಸಂಘದ ಜಿಲ್ಲಾ ಸಂಚಾಲಕ ಎಸ್.ಎ. ಗಫಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘಟನಾ ಸಂಚಾಲಕ ತುಕಾರಾಮ್ ಬಿ.ಪಾತ್ರೋಟಿ ಸ್ವಾಗತಿಸಿದರು. ನೂರ್ ಸಾಬ್ ಹೊಸಮನಿ ಅಧ್ಯಕ್ಷತೆ ವಹಿಸಿದ್ದರು. ಸೆಬಾಸ್ಟಿನ್ ಎ.ಆರ್. ವಂದಿಸಿದರು.

## ಬಂಗಾಳದ ನಂದಿಗ್ರಾಮದಲ್ಲಿ ಬಿಜೆಪಿ ಕಾರ್ಯಕರ್ತನ ಹತ್ಯೆ, ಚುನಾವಣೆಗೆ ಮುನ್ನ ಹಿಂಸಾಚಾರ



**■ವಿಜಯಸಾಕ್ಷಿ ಸುದ್ದಿ, ಪಶ್ಚಿಮ ಬಂಗಾಳ**

ಬಿಜೆಪಿ ಕಾರ್ಯಕರ್ತನ ಹತ್ಯೆ ಪ್ರಕರಣವು ಪಶ್ಚಿಮ ಬಂಗಾಳದ ನಂದಿಗ್ರಾಮದ ಸೋಣಚುರಾದಲ್ಲಿ ಹಿಂಸಾತ್ಮಕ ಪ್ರತಿಭಟನೆಯನ್ನು ಪ್ರಚೋದಿಸಿದ್ದು, ಅಲ್ಲಿ ಲೋಕಸಭಾ ಚುನಾವಣೆ ಮತದಾನಕ್ಕೆ ಎರಡು ದಿನ ಮಾತ್ರ ಬಾಕಿ ಇದೆ. ಟಿಎಂಸಿ ಮೇಲೆ ಆರೋಪ ಮಾಡುತ್ತಿರುವ ಕಮಲ ಪಕ್ಷದ ಬೆಂಬಲಿಗರು, ರಸ್ತೆಗಳನ್ನು ತಡೆದು, ಅಂಗಡಿಗಳನ್ನು ಸುಟ್ಟುಹಾಕಿದ್ದಾರೆ. ಕೆಲವು ಆಡಳಿತ ಪಕ್ಷದ ನಾಯಕರ ಮೇಲೆ ದಾಳಿ ನಡೆಸಿದ್ದಾರೆ ಎಂದು ವರದಿಯಾಗಿದೆ.

ಮೃತ ಬಿಜೆಪಿ ಕಾರ್ಯಕರ್ತನನ್ನು ರಥಿರಾಣಿ ಆರಿ (56) ಎಂದು ಗುರುತಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆಕೆಯ ಮಗ ಸಂಜಯ್ ಆರಿ (35) ಮತ್ತು ಹಲವಾರು ಬಿಜೆಪಿ ಬೆಂಬಲಿಗರು ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡವರಲ್ಲಿ ಸೇರಿದ್ದಾರೆ.

ಬಿಜೆಪಿಯ ಎಸ್ಸಿ ಮೋರ್ಚಾದ ಮುಖಂಡ ಸಂಜಯ್ ಮತ್ತು ಮತ್ತೊಬ್ಬ ಗ್ರಾಮಸ್ಥರು ಗಾಯಗೊಂಡಿದ್ದಾರೆ

ಚಿಕಿತ್ಸೆಗಾಗಿ ಕಲ್ಕತ್ತಾಗೆ ಕಳುಹಿಸಲಾಗಿದೆ, ಇತರರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎನ್ನಲಾಗಿದೆ.

ಗುರುವಾರ ಮುಂಜಾನೆ 2 ಗಂಟೆ ಸುಮಾರಿಗೆ ಟಿಎಂಸಿ ಕಾರ್ಯಕರ್ತರು ಗ್ರಾಮಸ್ಥರನ್ನು ಬೆದರಿಸಲು ಸಾಧ್ಯವಿಲ್ಲ ಎಂದು ಖಚಿತಪಡಿಸಿಕೊಳ್ಳಲು ಗಸ್ತು ತಿರುಗುತ್ತಿದ್ದ ಬಿಜೆಪಿ ಬೆಂಬಲಿಗರ ಗುಂಪು ಕನಿಷ್ಠ 10 ಬೈಕ್‌ಗಳನ್ನು ತಮ್ಮ ಟ್ರ್ಯಾಕ್‌ನಲ್ಲಿ ನಿಲ್ಲಿಸಿದಾಗ ಗಲಾಟೆ ಪ್ರಾರಂಭವಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಉಭಯ ಪಕ್ಷಗಳ ಕಾರ್ಯಕರ್ತರ ನಡುವೆ ತೀವ್ರ ಮಾತಿನ ಚಕಮಕಿ ನಡೆದಿದೆ.

ಈ ಪ್ರದೇಶದಲ್ಲಿ ಗಸ್ತು ತಿರುಗುತ್ತಿದ್ದ ಬಿಜೆಪಿ ತಂಡದಲ್ಲಿ ಸಂಜಯ್ ಇದ್ದರು ಎಂದು ಪೂರ್ವ ಮಿಡ್ನಾಪುರದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ರಾತ್ರಿ 2 ಗಂಟೆ ಕಳೆದರೂ ಮನೆಗೆ ಬಾರದೇ ಇದ್ದಾಗ ರಥಿರಾಣಿ ಮಗನನ್ನು ಹುಡುಕಲು ಹೊರಟರು. ಅವರು ಸಮಸ್ಯೆಯ ಸ್ಥಳಕ್ಕೆ ತಲುಪುತ್ತಿದ್ದಂತೆ, ಎರಡು ಗುಂಪುಗಳ ನಡುವೆ ಘರ್ಷಣೆ ನಡೆಯಿತು. ನಂದಿಗ್ರಾಮ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಕರೆದೊಯ್ದ ಏಳು ಮಂದಿ ಗಾಯಾಳುಗಳ ಪೈಕಿ ರಥಿರಾಣಿ ಅವರು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

# ಶರಣ ಸಂಸ್ಕೃತಿ ಸುಖ ಜೀವನದ ದಾರಿದೀಪ

**■ವಿಜಯಸಾಕ್ಷಿ ಸುದ್ದಿ, ಹರಪನಹಳ್ಳಿ**

ಇಂದಿನ ಬದುಕಿಗೆ ಶರಣ ಸಂಸ್ಕೃತಿ ಅತ್ಯಗತ್ಯವಾಗಿದ್ದು, ಮುಂದಿನ ಪೀಳಿಗೆಯ ಸುಖ ಜೀವನಕ್ಕೆ ದಾರಿದೀಪವಾಗಿದೆ ಎಂದು ಗವಿಮಠ ಹಡಗಲಿಯ ಹಿರಿ ಶಾಂತವೀರ ಮಹಾಸ್ವಾಮಿಗಳು ತಿಳಿಸಿದರು.

ತಾಲೂಕಿನ ಕಾಶಿಮಠ ಬಡಾವಣೆಯ ಕಾಶಿಮಠದಲ್ಲಿ ಗುರುವಾರ ತಾಲೂಕು ಶರಣ ಸಾಹಿತ್ಯ ಪರಿಷತ್ ಘಟಕದ ವತಿಯಿಂದ, ಶ್ರೀಮತಿ ನಿಂಗಮ್ಮ ಹಾಗೂ ಜಿ ನಾಗನಗೌಡ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ನಾಡಿನ ಎಲ್ಲೆಡೆ ಶರಣರ ಸಾಹಿತ್ಯಗಳನ್ನು ಪಸರಿಸುವ ಮೂಲಕ, ಇಂದಿನ ಒತ್ತಡದ ಬದುಕಿನ



ತೊಳಲಾಟದಲ್ಲಿ ತಲ್ಲೀನರಾಗಿರುವ ಮನುಷ್ಯನನ್ನು ಸಾಹಿತ್ಯದ ಕಡೆಗೆ ಚಿತ್ತ ಹರಿಸುವಂತೆ ಮಾಡಬೇಕಿದೆ. ಶರಣರ ವಚನಗಳು ನಮ್ಮ ಬದುಕಿನಲ್ಲಿ ಹಾಸು ಹೊಕ್ಕಾಗಿ ಕಾಯಕ ಸಂಸ್ಕೃತಿಯನ್ನು ಪ್ರಸಾರ ಮಾಡಬೇಕಾದರೆ ದತ್ತಿ ಉಪನ್ಯಾಸಗಳಲ್ಲಿ ಭಾಗಿಯಾಗಬೇಕು ಎಂದರು.

ಮೈಸೂರಿನ ನಿವೃತ್ತ ಶಿಕ್ಷಣಾಧಿಕಾರಿ ಭರಮಪ್ಪ ಮಾತನಾಡಿ, 12ನೇ ಶತಮಾನದ ಆರಂಭದಲ್ಲಿ ಶರಣ ಚಳುವಳಿಯು ಸರ್ವ ಜನಾಂಗದ ಅಭ್ಯುದಯಕ್ಕೆ ಕಾರಣವಾಗಿ ಅನುಭವಮಂಟವನ್ನು ತೆರೆದ ಕೀರ್ತಿ ಹಾಗೂ ವಿಶ್ವಕ್ಕೆ ಮೊದಲ ಸಂಸತ್ತು ನೀಡಿದ ಗೌರವಕ್ಕೆ ಪಾತ್ರವಾಗಿದ್ದು, ಮಾನವರ ಅಭಿವೃದ್ಧಿಗೆ ದೂರದೃಷ್ಟಿ ಹೊಂದಿದ ಶರಣರ ಸಂಸ್ಕೃತಿಯು ಇಂದಿನ ಯುವ ಪೀಳಿಗೆಗೆ ಅತ್ಯಗತ್ಯವಾಗಿದೆ ಎಂದರು.

ಶರಣ ಸಾಹಿತ್ಯ ಪರಿಷತ್ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿ ಬಣಕಾರ ರಾಜಶೇಖರ್ ಮಾತನಾಡಿ, ಶರಣ ಸಾಹಿತ್ಯ ಪ್ರಕಾರವು ವಿಶ್ವದ ಶ್ರೇಷ್ಠ ರಚನೆಯಾಗಿದ್ದು, ಪ್ರಸ್ತುತ ಉಳಿದಿರುವ ಸಾಹಿತ್ಯದ ಸಂದೇಶವನ್ನು ಅನುಸರಿಸಿದರೆ, ನಮ್ಮ ಜೀವನ ಪಾವನವಾಗುತ್ತದೆ. ಕರ್ನಾಟಕ ಸಾಂಸ್ಕೃತಿಕ ನಾಯಕನೆಂದು ಬಸವಣ್ಣನವರನ್ನು ಕೇವಲ ಬಣ್ಣಿಸಿದರಷ್ಟೇ ಸಾಲದು, ಶರಣ ಸಂದೇಶವನ್ನು ಮನೆ ಮನೆಗೆ ಮುಟ್ಟಿಸುವ ಕಾರ್ಯವಾಗಬೇಕಿದೆ ಎಂದರು.

ಷಣ್ಮುಖಪ್ಪ ಪೂಜಾರ್, ಕೆ.ಎಸ್. ವೀರಭದ್ರಪ್ಪ, ಎಸ್.ಹೆಚ್. ವಿಠೋಬಾ, ಕೆ. ಹನುಮಂತಪ್ಪ ಆರುಂಡಿ ನಾಗರಾಜ, ಪಿ. ರಾಮನಮಲಿ, ಸಿ. ಸಿದ್ದಪ್ಪ, ಕೆ. ವಿಜಯಕುಮಾರ್, ಪುಷ್ಪಾ ದಿವಾಕರ್ ಹಾಗೂ ಪದಾಧಿಕಾರಿಗಳು ಇದ್ದರು.

### ಪುನಶ್ಚೇತನ ತರಬೇತಿ ಶಿಬಿರದಲ್ಲಿ ನಿವೃತ್ತ ಜಂಟಿ ನಿರ್ದೇಶಕ ಬಿ.ಎಸ್. ಗೌಡರ ಉಪನ್ಯಾಸ

# ಸೇವಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ

**■ವಿಜಯಸಾಕ್ಷಿ ಸುದ್ದಿ, ನರೇಗಲ್**

ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ಕಡ್ಡಾಯವಾಗಿ ಸಂಸ್ಥೆಯ ನಿಯಮಾವಳಿಗಳನ್ನು ಪಾಲಿಸಬೇಕು. ಏಕೆಂದರೆ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಾತಿ ಮಾಡಿಕೊಳ್ಳುವ ಅಧಿಕಾರವು ಸಂಸ್ಥೆಗಳಿಗೆ ಇರುವುದರಿಂದ ಆ ಸಂಸ್ಥೆಗಳೆ ನೌಕರರ ನೇಮಕಾತಿ ಪ್ರಾಧಿಕಾರಿಗಳಾಗಿರುತ್ತವೆ. ಆದ್ದರಿಂದ ಸಂಸ್ಥೆಗಳು ರೂಪಿಸುವ ನಿಯಮಗಳಿಗೆ ಅಲ್ಲಿನ ನೌಕರರು ನಿಷ್ಠೆಯಿಂದ ಇರುವುದು ಅವಶ್ಯಕ ಎಂದು ಪ.ಪೂ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಬಿ.ಎಸ್. ಗೌಡರ ಹೇಳಿದರು.

ಪಟ್ಟಣದ ಶ್ರೀ ಅನ್ನದಾನೇಶ್ವರ ಪದವಿ ಕಾಲೇಜಿನ ಸಭಾಂಗಣದಲ್ಲಿ ನಡೆದ ಮೂರು ದಿನಗಳ ಪುನಶ್ಚೇತನ ತರಬೇತಿ ಶಿಬಿರದ 3ನೇ ದಿನ ಅವರು 'ಅನುದಾನಿತ ಶಿಕ್ಷಣ ಸಂಸ್ಥೆಗಳ ನಿಯಮಾವಳಿಗಳು ಹಾಗೂ ನೌಕರರ ಜವಾಬ್ದಾರಿಗಳು' ವಿಷಯದ ಕುರಿತು ಮಾತನಾಡಿದರು.



ಸಂಸ್ಥೆ ರೂಪಿಸಿದ ನಿಯಮಾವಳಿಗಳಿಗೆ ಅನುಗುಣವಾಗಿ ಅಲ್ಲಿ ಆಯ್ಕೆಯಾದ ಸಿಬ್ಬಂದಿ ತಮ್ಮ ಕಾರ್ಯ ನಿರ್ವಹಿಸಬೇಕಾಗುತ್ತದೆ. ಅಲ್ಲಿನ ನಿಯಮಗಳಿಗೆ ವ್ಯತಿರಿಕ್ತವಾಗಿ ನಡೆದುಕೊಂಡರೆ ಆ ನೌಕರನ ಮೇಲೆ ಯಾವುದೇ ರೀತಿಯ ಕ್ರಮ ಕೈಗೊಳ್ಳಲು ಸಂಸ್ಥೆಗೆ ಅಧಿಕಾರವಿದ್ದು, ಇಲಾಖೆಯೊಂದಿಗೆ ಸಮಾಲೋಚಿಸಿ ನೌಕರನ ಮೇಲೆ ಸಂಸ್ಥೆ ಕ್ರಮ ಜರುಗಿಸಬಹುದಾಗಿದೆ. ಆದ್ದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರು ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂದು ಗೌಡರ ಹೇಳಿದರು.

ನಾನು ಹೇಗೂ ನೌಕರಿ ಪಡೆದಿದ್ದೇನೆ. ಅದಕ್ಕೆ ಇಲಾಖೆಯ ಅನುಮತಿ ದೊರಕಿದೆ. ಇನ್ನು ನನ್ನನ್ನು ಕೇಳುವವರು ಯಾರೂ ಇಲ್ಲ ಎಂಬ ರೀತಿಯಲ್ಲಿ ನೌಕರನು ವರ್ತಿಸಬಾರದು. ಅವನ ವರ್ತನೆ ಸರಿಯಿಲ್ಲ ಎಂದು ಸಂಸ್ಥೆಗೆ ಅನ್ನಿಸಿದರೆ ಅವರು ನೋಟೀಸ್ ನೀಡಿ ಎಚ್ಚರಿಕೆ ನೀಡಬಹುದು. ಅದಕ್ಕೂ ಜಗ್ಗದಿದ್ದರೆ ಮುಂದಿನ ಕಾನೂನು ಕ್ರಮಕ್ಕೂ ಹೋಗಲು ಸಂಸ್ಥೆಗೆ ಅಧಿಕಾರವಿದೆ. ಆದ್ದರಿಂದ ನೌಕರನು ತನ್ನನ್ನು ನೇಮಕ ಮಾಡಿಕೊಂಡ ಸಂಸ್ಥೆಗೆ ಎಂದಿಗೂ ವಿಧೇಯನಾಗಿರಬೇಕು. ಖಾಸಗಿ ಸಂಸ್ಥೆಗಳ ನಿಯಮಗಳ ಜೊತೆಗೆ ನೌಕರನು ಸರಕಾರದ ಕೆಸಿಎಸ್‌ಆರ್ ನಿಯಮಗಳನ್ನೂ ಸಹ ಪಾಲಿಸವುದು ಅವಶ್ಯಕವಾಗಿದೆ ಎಂದು ಗೌಡರ ಹೇಳಿದರು.

ನಂತರ ಅವರು ನೌಕರನು ಮಾಡುವ ಯಾವ ಯಾವ ಅಪರಾಧಗಳಿಗೆ ಯಾವ ಯಾವ ಕಾನೂನು ಕ್ರಮಗಳಿವೆ ಎಂಬುದನ್ನು ಉದಾಹರಣೆಗಳ ಮೂಲಕ ವಿವರಿಸಿದರು.

ವೇದಿಕೆಯ ಮೇಲೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ, ಆಡಳಿತಾಧಿಕಾರಿ ಎನ್. ಆರ್. ಗೌಡರ, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಬಸವರಾಜ ವೀರಾಪೂರ, ನಿವೃತ್ತ ಪ್ರಾಚಾರ್ಯ ಬಿ.ಎಫ್. ಚೇಗರೆಡ್ಡಿ ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕ ಸಂಗಮೇಶ ಹೂಲಗೇರಿ ನಿರೂಪಿಸಿದರು. ಮುಖ್ಯ ಶಿಕ್ಷಕ ಸಜ್ಜನ ಪರಿಚಯಿಸಿದರು. ಮುಖ್ಯ ಶಿಕ್ಷಕಿ ಭಾರತಿ ಶಿರ್ಸಿ ವಂದಿಸಿದರು.

ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ವೇತನವನ್ನೇನೋ ಸರಕಾರ ನೀಡುತ್ತದೆ. ಅದನ್ನು ಅನುದಾನವೆಂದು ಕರೆಯಲಾಗುತ್ತದೆ. ಈ ಅನುದಾನವನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರಕಾರವು ನೀಡುತ್ತಿದ್ದು, ಅಲ್ಲಿನ ನೌಕರರ ನಡವಳಿಕೆಯ ನಿಯಮಾವಳಿಗಳನ್ನು ಆಯಾ ಸಂಸ್ಥೆಗಳೇ ರೂಪಿಸಬೇಕಾಗುತ್ತದೆ. ಹೀಗೆ ತಮಗೆ ಅನುಕೂಲಕರ ನಿಯಮಗಳನ್ನು ರೂಪಿಸಿ ನೌಕರರನ್ನು ದುಡಿಸಿಕೊಳ್ಳುವ ಜವಾಬ್ದಾರಿ ಆಯಾ ಸಂಸ್ಥೆಗಳದ್ದೇ ಆಗಿರುತ್ತದೆ ಎಂದು ಬಿ.ಎಸ್. ಗೌಡರ ಮಾಹಿತಿ ನೀಡಿದರು.

## ಡಿಎಸ್‌ಎಸ್ ಸಂಘಟನಾ ಸಂಚಾಲಕರ ನೇಮಕ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**



ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಸಂಘಟನಾ ಸಂಚಾಲಕ ಎಸ್.ಎನ್. ಬಳ್ಳಾರಿ ಅವರ ಆದೇಶದ ಮೇರೆಗೆ ಗದಗ ಜಿಲ್ಲಾ ಡಿಎಸ್‌ಎಸ್ ಸಂಘಟನಾ ಸಂಚಾಲಕರಾಗಿ ಪಟ್ಟಣದ ಯುವ ಮುಖಂಡ ಸದಾನಂದ ಅಶೋಕ ನಂದೆಣ್ಣವರ ಇವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಮತದಾನದ ಅಂಕಿಅಂಶ ಅಪ್‌ಲೋಡ್ ಮಾಡುವಂತೆ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಲು ನಿರಾಕರಿಸಿದ ಸುಪ್ರೀಂ ಕೋರ್ಟ್

**■ವಿಜಯಸಾಕ್ಷಿ ಸುದ್ದಿ, ನವದೆಹಲಿ**



ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಚುನಾವಣಾ ಆಯೋಗವು ತನ್ನ ವೆಬ್‌ಸೈಟ್‌ನಲ್ಲಿ ಮತದಾನ ಕೇಂದ್ರವಾರು ಮತದಾರರ ಅಂಕಿಅಂಶಗಳನ್ನು ಅಪ್‌ಲೋಡ್ ಮಾಡಲು ನಿರ್ದೇಶನಗಳನ್ನು ನೀಡುವಂತೆ ಸರ್ಕಾರೇತರ ಸಂಸ್ಥೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಮಾಡಿದ ಮನವಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದ್ದು, ಚುನಾವಣಾ ಸಮಿತಿಗೆ ಅಷ್ಟೊಂದು ಮಾನವಶಕ್ತಿಯನ್ನು ಸಜ್ಜುಗೊಳಿಸಲು ಕಷ್ಟವಾಗುತ್ತದೆ ಎಂದು ಹೇಳಿದೆ.

ಐದು ಹಂತದ ಮತದಾನ ಮುಕ್ತಾಯವಾಗಿದ್ದು, ಎರಡು ಹಂತಗಳು ಬಾಕಿಯಿರುವುದರಿಂದ ಸದ್ಯಕ್ಕೆ ಅಂತಹ ಯಾವುದೇ ನಿರ್ದೇಶನಗಳನ್ನು ನೀಡಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ ಮತ್ತು ಸತೀಶ್ ಚಂದ್ರ ಶರ್ಮಾ ಅವರ ರಜಾಕಾಲದ ಪೀಠ ಹೇಳಿದೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಚುನಾವಣೆಯ ನಂತರ ನಿಯಮಿತ ಪೀಠದ ಮುಂದೆ ಪಟ್ಟಿ ಮಾಡುವಂತೆ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮುಂದೂಡಿತು. ಅರ್ಜಿಯಲ್ಲಿನ ಮನವಿಗಳು 2019 ರಿಂದ ಬಾಕಿ ಉಳಿದಿರುವ ಮುಖ್ಯ ಅರ್ಜಿಯಂತೆಯೇ ಇರುತ್ತವೆ ಎಂದು ಮೇಲ್ನೋಟಕ್ಕೆ ತೋರುತ್ತಿದೆ ಎಂದು ಸೂಚಿಸಿತು.

ಚುನಾವಣಾ ಸಮಿತಿಯು ತನ್ನ ವೆಬ್‌ಸೈಟ್‌ನಲ್ಲಿ ಮತದಾನದ ಡೇಟಾವನ್ನು ಅಪ್‌ಲೋಡ್ ಮಾಡಲು ಮಾನವಶಕ್ತಿಯನ್ನು ಸಜ್ಜುಗೊಳಿಸುವುದು ಕಷ್ಟಕರವಾಗಿದೆ ಎಂದು ಪೀಠ ಹೇಳಿದೆ.

"ಎಐನಲ್ಲಿ ಯಾವುದೇ ಪರಿಹಾರವನ್ನು ನೀಡುವುದು ಬಾಕಿ ಇರುವ ಮುಖ್ಯ ಅರ್ಜಿಯಲ್ಲಿ ಪರಿಹಾರವನ್ನು ನೀಡುತ್ತದೆ" ಎಂದು ಪೀಠ ಹೇಳಿದೆ.

ಮೇ 17 ರಂದು, ಪ್ರತಿ ಹಂತದ ಲೋಕಸಭೆ ಚುನಾವಣೆ ಮತದಾನ ಮುಕ್ತಾಯದ 48 ಗಂಟೆಗಳ ಒಳಗೆ ಮತದಾನ ಕೇಂದ್ರವಾರು ಮತದಾರರ ಅಂಕಿಅಂಶಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ನಿರ್ದೇಶನ ನೀಡುವಂತೆ ಕೋರಿ ಎನ್‌ಜಿಒ ಸಲ್ಲಿಸಿದ ಮನವಿಗೆ ಒಂದು ವಾರದೊಳಗೆ ಸುಪ್ರೀಂ ಕೋರ್ಟ್ ಚುನಾವಣಾ ಆಯೋಗದಿಂದ ಪ್ರತಿಕ್ರಿಯೆಯನ್ನು ಕೋರಿತ್ತು.

## 'ಮೊಮ್ಮಗನನ್ನು ವಿದೇಶಕ್ಕೆ ಕಳುಹಿಸಿದ್ದೇ ದೇವೇಗೌಡರು' ಸಿಎಂ ಪ್ರತಿಕ್ರಿಯೆ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**



ಕಳೆದ ತಿಂಗಳಿಂದ ತಲೆಮರೆಸಿಕೊಂಡಿರುವ ಲೈಂಗಿಕ ದೌರ್ಜನ್ಯದ ಆರೋಪಿ, ಪ್ರಜ್ವಲ್ ರೇವಣ್ಣ ಜರ್ಮನಿಗೆ ಪಲಾಯನ ಮಾಡಲು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಸಹಾಯ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ದೇವೇಗೌಡರೇ ಪ್ರಜ್ವಲ್ ರೇವಣ್ಣನನ್ನು ಕಳುಹಿಸಿದ್ದಾರೆಂದು ನಾನು ಭಾವಿಸುತ್ತೇನೆ. ಈಗ ಅವರು ಬರೆದಿರುವ ಪತ್ರ ಸಾರ್ವಜನಿಕ ಬಳಕೆಗೆ ಮಾತ್ರ" ಎಂದು ಅವರು ಹೇಳಿದ್ದಾರೆ.

ತಮ್ಮ ಪಕ್ಷದ ಲೆಟರ್‌ಹೆಡ್‌ನಲ್ಲಿ ಪ್ರಜ್ವಲ್‌ಗೆ ಗುರುವಾರ ಸಾರ್ವಜನಿಕ ಪತ್ರ ಬರೆದಿರುವ ಮಾಜಿ ಪ್ರಧಾನಿಗಳು, ಪೊಲೀಸರಿಗೆ ಶರಣಾಗಬೇಕು ಎಂದು ತಮ್ಮ ಮೊಮ್ಮಗನಿಗೆ ಆಜ್ಞೆ ಮಾಡಿದ್ದು, ಬರದಿದ್ದರೆ ಕುಟುಂಬದ ಕೋಪವನ್ನು ಎದುರಿಸಬೇಕು ಎಂದು ಎಚ್ಚರಿಸಿದರು.

ಈ ಬಗ್ಗೆ ಎಕ್ಸ್‌ನಲ್ಲಿ ಪತ್ರ ಹಂಚಿಕೊಂಡ ಮಾಜಿ ಪ್ರಧಾನಿ ದೇವೇಗೌಡರು, ಮೇ 18 ರಂದು ನಾನು ದೇವಸ್ಥಾನಕ್ಕೆ ಪೂಜೆ ಸಲ್ಲಿಸಲು ಹೊರಟಿದ್ದಾಗ ಪ್ರಜ್ವಲ್ ರೇವಣ್ಣ ಅವರ ಬಗ್ಗೆ ಮಾಧ್ಯಮಗಳೊಂದಿಗೆ ಮಾತನಾಡಿದ್ದೇನೆ, ಅವರು ನನಗೆ, ನನ್ನ ಇಡೀ ಕುಟುಂಬಕ್ಕೆ, ನನ್ನ ಸಹೋದ್ಯೋಗಿಗಳು, ಸ್ನೇಹಿತರು ಮತ್ತು ಅವರು ಉಂಟುಮಾಡಿದ ಆಘಾತ ಮತ್ತು ನೋವಿನಿಂದ ಚೇತರಿಸಿಕೊಳ್ಳಲು ನನಗೆ ಸ್ವಲ್ಪ ಸಮಯ ಹಿಡಿಯಿತು. ನನ್ನ ಮಗ ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಹಗರಣ ನಡೆದ ದಿನದಿಂದಲೂ ಅವರಿಗೆ ಕಾನೂನಿನಡಿಯಲ್ಲಿ ಕಠಿಣ ಶಿಕ್ಷೆಯಾಗಬೇಕು ಎಂದು ಪಕ್ಷದ ಕಾರ್ಯಕರ್ತರೇ ಹೇಳಿದ್ದರು ಎಂದರು.

ಕಳೆದ ಒಂದು ತಿಂಗಳಿನಿಂದ, ಸಿದ್ದರಾಮಯ್ಯ ಅವರು ಪ್ರಧಾನಿ ಮೋದಿಗೆ ಹಲವಾರು ಪತ್ರಗಳನ್ನು ಬರೆದಿದ್ದಾರೆ, ಅವರು ದೇಶದಿಂದ ಪಲಾಯನ ಮಾಡಲು ಬಳಸುತ್ತಿದ್ದ ರಾಜತಾಂತ್ರಿಕ ಪಾಸ್‌ಪೋರ್ಟ್ ಅನ್ನು ರದ್ದುಗೊಳಿಸುವಂತೆ ಕೇಂದ್ರವನ್ನು ಒತ್ತಾಯಿಸಿದ್ದಾರೆ. ದೇಶ ಬಿಟ್ಟು ಪಲಾಯನ ಮಾಡಲು ಹಾಗೂ ಕ್ರಿಮಿನಲ್ ಮೊಕದ್ದಮೆಗಳಿಂದ ತಪ್ಪಿಸಿಕೊಳ್ಳಲು ರಾಜತಾಂತ್ರಿಕ ಸವಲತ್ತುಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

# ಡಾ. ಪಂಡಿತ್ ಪುಟ್ಟರಾಜ ರೈತ ಸಂಘದ ಪದಾಧಿಕಾರಿಗಳ ಆಯ್ಕೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ರಾಜ್ಯ ಡಾ. ಪಂಡಿತ್ ಪುಟ್ಟರಾಜ ರೈತ ಸಂಘದ ಸವದತ್ತಿ ತಾಲೂಕ ಘಟಕ ಹಾಗೂ ಯಡ್ರಾವಿ, ಸುತಗಟ್ಟಿ ಗ್ರಾಮ ಘಟಕಗಳನ್ನು ಇತ್ತೀಚೆಗೆ ಸಂಘದ ಸಂಸ್ಥಾಪಕ ಅಧ್ಯಕ್ಷ ಎಂ.ಪಿ ಮುಳುಗುಂದ ಹಾಗೂ ಸಂಘದ ರಾಜ್ಯ ಉಪಾಧ್ಯಕ್ಷ ದಾವಲಸಾಬ್ ನಾಗನೂರ, ಎಚ್. ಎಚ್. ಕೊಪ್ಪಳ, ಶಬ್ಬೀರ್ ಮುಲ್ಲಾ, ಎಂ.ಪಿ. ಶಲವಡಿ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಸಂಘದ ರಾಜ್ಯ ಕಾರ್ಯದರ್ಶಿ ಉಮೇಶ್ ಗೋವನಕೊಪ್ಪ ಇವರನ್ನು ನೇಮಿಸಿ ಆದೇಶ ಪ್ರತಿಯನ್ನು ನೀಡಲಾಯಿತು.



ಸವದತ್ತಿ ತಾಲೂಕಾಧ್ಯಕ್ಷರಾಗಿ ಕೆಂಚಪ್ಪ ಬಿದರಗಟ್ಟಿ, ಉಪಾಧ್ಯಕ್ಷರಾಗಿ ಭೀಮಪ್ಪ ಜೇಡರ, ಪರಿಶಿಷ್ಟ ಪಂಗಡದ ಅಧ್ಯಕ್ಷರಾಗಿ ರಾಮಪ್ಪ ಹಾಸಟಿ, ಪರಿಶಿಷ್ಟ ಪಂಗಡ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಅರ್ಪಿತಾ ಹೊಸಟ್ಟಿ, ಸುತಗಟ್ಟಿ ಗ್ರಾಮ ಘಟಕದ ಅಧ್ಯಕ್ಷರಾಗಿ ಶಿವಜಾತಯ್ಯ ಹಿರೇಮಠ, ಸವದತ್ತಿ ಯುವ ಘಟಕದ ಅಧ್ಯಕ್ಷರಾಗಿ ಮನೋಹರ ಸೊಗಲದ, ಗ್ರಾಮ ಘಟಕದ ಸದಸ್ಯರಾಗಿ ಲಗ್ನವರ, ಸೊಗಲದ, ಸಿದ್ದಪ್ಪ ಮುತ್ನಾಳ್, ಬಸವಂತ ಮುದ್ನಾಳ ಮುಂತಾದವರನ್ನು ಆಯ್ಕೆ ಮಾಡಲಾಯಿತು.

## ಜಿಲ್ಲಾ ನಿವೃತ್ತರ ಸಂಘದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

**■ವಿಜಯಸಾಕ್ಷಿ ಸುದ್ದಿ, ಗದಗ**

ಬಸವೇಶ್ವರ ನಗರದಲ್ಲಿರುವ ಕರ್ನಾಟಕ ರಾಜ್ಯ ಗದಗ ಜಿಲ್ಲಾ ನಿವೃತ್ತರ ಸಂಘದಲ್ಲಿ ಮೇ ತಿಂಗಳಲ್ಲಿ ಜನಿಸಿದ ಸದಸ್ಯರ ಜನ್ಮದಿನ ಆಚರಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಮೇ 31ರಂದು ಬೆಳಿಗ್ಗೆ 11 ಗಂಟೆಗೆ ಸಂಘದ ಕಾರ್ಯಾಲಯದಲ್ಲಿ ಜರುಗಲಿದೆ.

ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಪ್ರೊ. ಕೆ.ಎಚ್. ಬೇಲೂರ ವಹಿಸಿಕೊಳ್ಳಲಿದ್ದಾರೆ. ಸದರಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬೆಳಗಾವಿ ವೆಸ್ಟೇಜ್ ಇಂಡಿಯಾ ಕಂಪನಿಯ ಕಾರ್ಯಕರ್ತ ಎಂ.ಬಿ. ಕಣದಾಳಿ ಆಗಮಿಸುವರು.

ದಾಸೋಹ ಸೇವೆಯನ್ನು ಎಲ್.ಎಸ್. ನೀಲಗುಂದ, ಜಿ.ಕೆ. ತಮ್ಮಣ್ಣವರ, ಬಿ.ಎಂ. ಬಿಳೆಯಲಿ, ವ್ಹಿ.ಎಸ್. ಮಾಗಳ, ಸಿ.ವ್ಹಿ. ಹುಣಸಿಮರದ, ಹೆಚ್.ಎಸ್. ದಂಡಿನ, ಕೆ.ಎಸ್. ಚೋರಗಸ್ತಿ ವಹಿಸಿಕೊಳ್ಳಲಿದ್ದಾರೆ.

ಸಂಘದ ಅಜೀವ ಸದಸ್ಯರು ತಪ್ಪದೇ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎ. ಬಳ್ಳಾರಿ ಹಾಗೂ ಕೋಶಾಧಿಕಾರಿ ಆರ್.ಟಿ. ನಾರಾಯಣಪೂರ ಪತ್ರಿಕಾ ಪ್ರಕಟಣೆಯ ಮೂಲಕ ವಿನಂತಿಸಿದ್ದಾರೆ.

# ಮೃತ್ಯುಂಜಯ ಅಪ್ಪನವರ ಸ್ಮರಣೋತ್ಸವ ನಾಳೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಮಣಕವಾಡದ ಮಹಿಮಾ ಪುರುಷ ಶ್ರೀಗುರು ಮೃತ್ಯುಂಜಯ ಮಹಾಸ್ವಾಮಿಗಳ ಸ್ಮರಣೋತ್ಸವ ಮಾಲಿಕೆ-12 ಹಾಗೂ ದ್ವಿತೀಯ ಪಿಯುಸಿ ವಿಜ್ಞಾನ ವಿದ್ಯಾರ್ಥಿಗಳ ಬೇಸಿಗೆ ಶಿಬಿರದ ಮುಕ್ತಾಯ ಹಾಗೂ ಬೀಳ್ಕೊಡುಗೆ ಸಮಾರಂಭ ರವಿವಾರ ಮುಂಜಾನೆ 10:30ಕ್ಕೆ ನಗರದ ಲಖಾನೆ ಆಸ್ಪತ್ರೆಯ ಎದುರಿಗಿನ ಮೃತ್ಯುಂಜಯ ಗುರುಕುಲ ಆಶ್ರಮದ ಸಭಾಭವನದಲ್ಲಿ ಜರುಗಲಿದೆ.




ಹಿರಿಯ ಸಾಹಿತಿ, ಸೌಹಾರ್ದ ಮಹಾಮನೆ ವೇದಿಕೆಯ ಅಧ್ಯಕ್ಷ ಐ.ಕೆ. ಕಮ್ಮಾರ ಸಮಾರಂಭದ ಅಧ್ಯಕ್ಷತೆ ವಹಿಸುವರು. ಮುಖ್ಯೋಪಾಧ್ಯಾಯೆ ಈರಮ್ಮ ಮುತಗಾರ ಹಾಗೂ ನಿರ್ಮಲ ವಿವಿಧೋದ್ದೇಶಗಳ ಸೇವಾ ಸಂಸ್ಥೆಯ ಅಧ್ಯಕ್ಷೆ ನಿರ್ಮಲಾ ತರವಾಡೆ ಹಾಗೂ ಪ್ರೊ. ಬಸವರಾಜ ನೆಲಜೇರಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಐ.ಕೆ. ಕಮ್ಮಾರರ 1977ನೇ ಸಾಲಿನ ಪಿಯುಸಿ ಗೆಳೆಯರಾದ ಜಗದೀಶ ಮಾಲಿಪಾಟೀಲ, ಚಂದ್ರು ಐಲಿ, ಕಳಕಪ್ಪ ಮೂಲಿಮನಿ, ಬಲಭೀರಸಿಂಗ ಜಮಾದಾರ, ಪ್ರಕಾಶ ಬಾರಟಕ್ಕೆ, ಸಂಕನೂರ, ಎಸ್.ಕೆ. ಮುದ್ಲಾಪೂರ, ಕುಲಕರ್ಣಿ, ಭಕ್ತರಾದ ನಾಗಾವಿಯ ಮೃತ್ಯುಂಜಯ ಹಟ್ಟಿ, ಕೆ.ಬಿ. ಮರಡ್ಡಿ, ಶಿವಣ್ಣ ಒಡೆಯರ, ಎಚ್.ಎನ್. ಕುರಿ, ಡಿ.ಜಿ. ಪಾಟೀಲ, ರಾಜೇಂದ್ರ ಕಲಬುರ್ಗಿ, ಶಿವಶಂಕರಪ್ಪ ಆರಟ್ಟಿ ಉಪಸ್ಥಿತರಿರುವರು. ಈ ಪುಣ್ಯ ಕಾರ್ಯದಲ್ಲಿ ಪಾಲ್ಗೊಂಡು ಪೂಜ್ಯ ಮೃತ್ಯುಂಜಯ ಅಪ್ಪನ ಕೃಪೆಗೆ ಪಾತ್ರರಾಗಲು ಆಶ್ರಮದ ವಿದ್ಯಾರ್ಥಿಗಳಾದ ಆಲಮ್, ಅಸ್ಲಂ, ಅಕ್ರಂ, ಸ್ನೇಹಾ, ಸಹನಾ, ಮಧು, ನೀಲಮ್ಮ, ಭೂಮಿಕಾ ಮುಂತಾದವರು ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ರಮೇಶ ಕೊಟ್ರಪ್ಪ ಅಬ್ಬಿಗೇರಿಯವರ ನಿಧನಕ್ಕೆ ಸಂತಾಪ


**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಸಂಘದ ಉಪಾಧ್ಯಕ್ಷರಾಗಿದ್ದ ದಿವಂಗತ ಶ್ರೀ ರಮೇಶ ಕೊಟ್ರಪ್ಪ ಅಬ್ಬಿಗೇರಿಯವರು ಮೇ 20ರಂದು ಹೃದಯಾಘಾತದಿಂದ ನಿಧನರಾದ ಹಿನ್ನೆಲೆಯಲ್ಲಿ ಶೋಕ ಸಭೆಯನ್ನು ಏರ್ಪಡಿಸಲಾಗಿತ್ತು.

ಅವರು ನಗರದ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಸಂಘದ ಉಪಾಧ್ಯಕ್ಷರಾಗಿ, ಶ್ರೀ ಜಗದ್ಗುರುಗಳ ಪರಮ ಭಕ್ತರಾಗಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ರಂಗದಲ್ಲಿ ತನು, ಮನ, ಧನದಿಂದ ಸೇವೆಯನ್ನು ಮಾಡುತ್ತಾ ಎಲ್ಲ ಧಾರ್ಮಿಕ ಕಾರ್ಯಗಳಲ್ಲಿ ಮುಂಚೂಣಿಯಲ್ಲಿ ನಿಂತು ಸೇವೆ ಮಾಡುತ್ತಿದ್ದ ಒಬ್ಬ ಶ್ರೇಷ್ಠ ಜೀವಿಯಾಗಿದ್ದರು. ಅವರ ಅಗಲಿಕೆಯಿಂದ ಸಮಾಜಕ್ಕೆ ಸಂಘ ಸಂಸ್ಥೆಗಳಿಗೆ ಅಪಾರವಾದ ನಷ್ಟವಾಗಿದೆ ಎಂದು ಆಗಮಿಸಿದ ಸರ್ವರೂ ಶೋಕ ವ್ಯಕ್ತಪಡಿಸಿದರು.

ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆಯನ್ನು ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಸಂಘದ ಅಧ್ಯಕ್ಷ ಮಂಜುನಾಥ ಈಶ್ವರಪ್ಪ ಬೇಲೇರಿ ವಹಿಸಿದ್ದರು. ಸಭೆಯಲ್ಲಿ ವ್ಹಿ.ಕೆ. ಗುರುಮಠ, ಸುರೇಶ ಅಬ್ಬಿಗೇರಿ, ಸಿದ್ದಲಿಂಗಪ್ಪ ಚಳಗೇರಿ, ವೀರಭದ್ರಯ್ಯ ಧನ್ನೂರಹಿರೇಮಠ, ಎಸ್.ಎಸ್. ಮೇಟಿ, ಚಂದ್ರು ಅಬ್ಬಿಗೇರಿ, ಸಂಗಮ್ಮ ಹಿರೇಮಠ, ಶರಣಪ್ಪ ಬಳಿಗೇರ, ಮಹೇಶ ಬೇಲೇರಿ, ರಾಜು ಮುಧೋಳ, ಸಿ.ಜಿ. ಹಿರೇಗೌಡರ, ಸುನೀಲ ಅಬ್ಬಿಗೇರಿ, ಎಲ್.ಪಿ. ಕಂಬಿ, ವ್ಹಿ.ಎಸ್. ಶಿವಕಾಳಿಮಠ, ಜ್ಯೋತಿ ಚಳಗೇರಿ, ಮಂಗಳಾ ಬೇಲೇರಿ, ಶಕುಂತಲಾ ಬೇಲೇರಿ, ಶಾಂತಾ ಹಿರೇಮಠ, ಲತಾ ಮುತ್ತಿನಪೆಂಡಿಮಠ ಮುಂತಾದವರಿದ್ದರು.

## ನಿಧನ ವಾರ್ತೆ



**ಹನುಮಂತಗೌಡ್ರು ಶಿವನಗೌಡ ಪಾಟೀಲ**

ಗದಗ: ಅಖಿಲ ಕರ್ನಾಟಕ ಕುಡುಒಕ್ಕಲಿಗರ ಸಂಘ ಗದಗ ರಾಜ್ಯಾಧ್ಯಕ್ಷ ಶಿವಕುಮಾರ್ ಹನುಮಂತಗೌಡ ಪಾಟೀಲರ ತಂದೆ ಹನುಮಂತಗೌಡ್ರು ಶಿವನಗೌಡ ಪಾಟೀಲರು ಶುಕ್ರವಾರ ತಮ್ಮ 75ನೇ ವಯಸ್ಸಿನಲ್ಲಿ ಶಿವಾಧೀನರಾದರು. ಸದರಿಯವರ ಅಂತ್ಯಕ್ರಿಯೆಯು ಶನಿವಾರ ಮಧ್ಯಾಹ್ನ 2 ಗಂಟೆಗೆ ನೆರವೇರಲಿದೆ.

### ಶಿಕ್ಷಕರ ಪುನಶ್ಚೇತನ ಶಿಬಿರದಲ್ಲಿ ಸುರೇಶ ಗೆಜ್ಜಿ ಅಭಿಮತ

# ಶಿಕ್ಷಕ ವ್ಯಕ್ತಿಯಲ್ಲ, ಶಕ್ತಿ

**■ವಿಜಯಸಾಕ್ಷಿ ಸುದ್ದಿ, ನರೇಗಲ್**

ಶಿಕ್ಷಕ ವೃತ್ತಿ ಸಾಮಾನ್ಯ ವೃತ್ತಿಯಲ್ಲ. ಮಕ್ಕಳ ಭವಿಷ್ಯವನ್ನು ರೂಪಿಸುವ ಶಿಕ್ಷಕ ಬರೀ ಒಂದು ವ್ಯಕ್ತಿಯಲ್ಲ, ಆತನೊಂದು ದೊಡ್ಡ ಶಕ್ತಿ ಎಂದು ವಿಜಯಪುರದ ಗೆಜ್ಜಿ ಕರಿಯರ್ ಅಕಾಡೆಮಿಯ ಸುರೇಶ ಗೆಜ್ಜಿ ಹೇಳಿದರು.

ಪಟ್ಟಣದ ಶ್ರೀ ಅನ್ನದಾನೇಶ್ವರ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ಅಕ್ಷರ ಭಾರತ ಪ್ರತಿಷ್ಠಾನ ಮತ್ತು ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಆಶ್ರಯದಲ್ಲಿ ನಡೆದಿರುವ ಶಿಕ್ಷಕರ ಪುನಶ್ಚೇತನ ಶಿಬಿರದಲ್ಲಿ 'ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಶಿಕ್ಷಕರ ಪಾತ್ರ' ವಿಷಯದ ಬಗ್ಗೆ ಅವರು ಮಾತನಾಡಿದರು.



ಬೇರೆ ಯಾವ ಹುದ್ದೆಯೂ ಸಿಗಲಿಲ್ಲ ಎಂದು ಈ ಹುದ್ದೆಗೆ ಬಂದಿರುವೆ ಎಂದು ಶಿಕ್ಷಕ ಎಂದಿಗೂ ಹೇಳಬಾರದು. ಒಮ್ಮೆ ಈ ಹುದ್ದೆಯನ್ನು ಒಪ್ಪಿ ಕ್ಷೇತ್ರಕ್ಕೆ ಅವನು ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಮನೆಯ ಜಂಜಡಗಳನ್ನು ದೂರವಿಟ್ಟು ವಿದ್ಯಾರ್ಥಿಯ ಏಳಿಗೆಯೇ ನನ್ನ ಗುರಿ ಎಂದು ಸಮರ್ಪಣಾ ಮನೋಭಾವದಿಂದ ಆತ ಶ್ರಮಿಸಿದಾಗ ಮಾತ್ರ ವಿದ್ಯಾರ್ಥಿಯ ಸರ್ವತೋಮುಖ ಬೆಳವಣಿಗೆಯಾಗಲು ಸಾಧ್ಯ. ಸಮರ್ಪಣಾ ಮನೋಭಾವವನ್ನು ಹೊಂದದ ಯಾವುದೇ ವ್ಯಕ್ತಿ ಶಿಕ್ಷಕ ಹುದ್ದೆಯಿಂದ ನಿರ್ಗಮಿಸುವುದು ಉತ್ತಮ ಎಂದು ಅವರು ಅಭಿಪ್ರಾಯಪಟ್ಟರು.

ಶಿಕ್ಷಕ ಎಂದಿಗೂ ನಿರಹಂಕಾರಿಯಾಗಿರಬೇಕು. ಮೊದಲು ಆತ ವಿದ್ಯಾರ್ಥಿಯಾಗಿದ್ದು-ಕೊಂಡು ತನ್ನ ಪಾಠವನ್ನು ಸರಿಯಾಗಿ ಅರ್ಥ ಮಾಡಿಕೊಂಡು ವಿಷಯ ಪರಿಣಿತಿಯನ್ನು ಪಡೆದುಕೊಂಡು ವರ್ಗಕೋಣೆಗೆ ತೆರಳಬೇಕು. ಶಿಕ್ಷಕರು ಸಚ್ಚಾರಿತ್ರ್ಯವಂತರಾಗಿರಬೇಕು, ತಮ್ಮ ಕಾರ್ಯದ ಬಗ್ಗೆ ಶ್ರದ್ಧೆಯನ್ನು ಹೊಂದಿರಬೇಕು, ಪ್ರಾಮಾಣಿಕತೆಯಿಂದ ತಮ್ಮ ಕಾರ್ಯ ನಿರ್ವಹಿಸಬೇಕು, ತಮ್ಮ ವಿಷಯದ ಬಗ್ಗೆ ಆಳವಾದ ಜ್ಞಾನ ಮತ್ತು ಪ್ರೀತಿಯನ್ನು ಹೊಂದಿರುವವ ಎಂದಿಗೂ ಉತ್ತಮ ಶಿಕ್ಷಕನೆನಿಸಿಕೊಳ್ಳುತ್ತಾನೆ ಎಂದು ಹೇಳಿದರು.

ಪ್ರಾಧ್ಯಾಪಕ ಕಲ್ಲಯ್ಯ ಹಿರೇಮಠ ನಿರೂಪಿಸಿದರು. ಶಿಕ್ಷಕ ಗುಗ್ಗರಿ ಪರಿಚಯಿಸಿದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ ದೊಡ್ಡಮೇಟಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಸಂಸ್ಥೆಯ ಅನೇಕ ಪದಾಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು.

ಪ್ರಶಸ್ತಿಗಳ ಬೆನ್ನು ಹತ್ತಿ ಓಡಾಡುವವರು ಶಿಕ್ಷಕರಲ್ಲ. ಮಕ್ಕಳ ಮನ ಗೆದ್ದು ಅವರಿಂದ ಸೈ ಎನ್ನಿಸಿಕೊಂಡ ಯಾವುದೇ ಶಿಕ್ಷಕನೂ ರಾಷ್ಟ್ರ ಪ್ರಶಸ್ತಿ ಪಡೆದ ಶಿಕ್ಷಕನಿಗಿಂತಲೂ ಉತ್ತಮ. ಶಿಕ್ಷಕನ ಒಂದೇ ಒಂದು ಪ್ರೇರಣಾತ್ಮಕ, ಧನಾತ್ಮಕ ಮಾತು ಒಬ್ಬ ವಿದ್ಯಾರ್ಥಿಯನ್ನು ಎಷ್ಟು ಎತ್ತರಕ್ಕಾದರೂ ಕರೆದುಕೊಂಡು ಹೋಗಬಹುದು. ಆದ್ದರಿಂದ ಶಿಕ್ಷಕನ ನಡೆ-ನುಡಿ, ಆಚಾರ-ವಿಚಾರ, ಮಾತು-ಕತೆ ಎಲ್ಲವೂ ಎಂದಿಗೂ ಧನಾತ್ಮಕವಾಗಿರಬೇಕು ಎಂದು ಸುರೇಶ ಗೆಜ್ಜಿ ಅಭಿಪ್ರಾಯಪಟ್ಟರು.

## ಗುಜರಾತ್ : ಗೋರಕ್ಷಕರಿಂದ ಜಾನುವಾರು ಸಾಗಿಸುತ್ತಿದ್ದ ವ್ಯಕ್ತಿಯ ಹತ್ಯೆ

■ ವಿಜಯಸಾಕ್ಷಿ ಸುದ್ದಿ, ಗುಜರಾತ್

ಗುಜರಾತ್‌ನ ಬನಸ್ಕಾಂತದಲ್ಲಿ ಗುರುವಾರ (ಮೇ 23) ಎಮ್ಮೆಗಳನ್ನು ಸಾಗಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಸ್ವಯಂಘೋಷಿತ ಗೋರಕ್ಷಕರು ಹತ್ಯೆಗೈದಿದ್ದಾರೆ ಎಂದು ವರದಿಗಳು ತಿಳಿಸಿವೆ.

ಗುರುವಾರ ಮುಂಜಾನೆ 40 ವರ್ಷದ ಮಿಶ್ರಿಖಾನ್ ಬಲೋಚ್ ಎಂಬಾತ ಎಮ್ಮೆಗಳನ್ನು ರಾಸುಗಳ ಮಾರುಕಟ್ಟೆಗೆ ಸಾಗಿಸುತ್ತಿದ್ದಾಗ ಐವರ ಗುಂಪು ಹತ್ಯೆಗೈದಿದೆ ಎಂದು ಸ್ಥಳೀಯ ಪೊಲೀಸರನ್ನು ಉಲ್ಲೇಖಿಸಿ ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ.

ಹತ್ಯೆಯಾದ ಮಿಶ್ರಿಖಾನ್ ಜೊತೆಯಲ್ಲಿ ಹುಸೇನ್ ಖಾನ್ ಬಲೋಚ್ ಎಂಬ ವ್ಯಕ್ತಿ ಕೂಡ ಇದ್ದರು. ಆತ ದಾಳಿಕೋರರಿಂದ ತಪ್ಪಿಸಿಕೊಂಡಿದ್ದು, ಪೊಲೀಸರಿಗೆ ದೂರು ನೀಡಿದ್ದಾರೆ ಎಂದು ವರದಿ ಹೇಳಿದೆ.

ಆರೋಪಿಗಳ ವಿರುದ್ಧ ಕೊಲೆ, ಶಸ್ತ್ರಾಸ್ತ್ರಗಳ ಸಂಗ್ರಹ ಮತ್ತು ಗಲಭೆಗೆ ಸಂಬಂಧಿಸಿದ ಸೆಕ್ಷನ್‌ಗಳಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಆರೋಪಿಗಳ ಪೈಕಿ ಒಬ್ಬನನ್ನು ಅಖೇರಾಜ್‌ಸಿನ್ಹ್ ಪರ್ಬತ್‌ಸಿನ್ಹ್ ವಘೇಲಾ ಎಂಬ ಗುರುತಿಸಲಾಗಿದೆ. ಈತ ಕಳೆದ ವರ್ಷ ಜುಲೈನಿಂದ ಗೋರಕ್ಷಣೆ ಸಂಬಂಧಿತ ಹಿಂಸಾಚಾರದ ಘಟನೆಯಲ್ಲಿ ಆರೋಪಿಯಾಗಿದ್ದ. ಆದರೆ, ಆತನ ಮೇಲಿನ ಪ್ರಕರಣವನ್ನು ಗುಜರಾತ್ ಹೈಕೋರ್ಟ್ ರದ್ದುಗೊಳಿಸಿದೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಹೇಳಿದೆ.

ಪ್ರಕರಣದಲ್ಲಿ ಐವರು ಆರೋಪಿಗಳ ಪೈಕಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ ಮತ್ತು ಇತರ ಮೂವರಿಗಾಗಿ ಶೋಧ ನಡೆಸುತ್ತಿದ್ದಾರೆ. ಪೊಲೀಸರು ಮಿಶ್ರಿಖಾನ್ ಬಲೋಚ್ ಹತ್ಯೆಯನ್ನು ಗುಂಪು ಹತ್ಯೆ ಎಂಬುವುದನ್ನು ನಿರಾಕರಿಸಿದ್ದಾರೆ. ಹತ್ಯೆಯಾದ ವ್ಯಕ್ತಿ ಮತ್ತು ಆರೋಪಿಗಳ ನಡುವೆ ಹಳೆಯ ವೈಷ್ಯಮ್ಯವಿತ್ತು ಎಂದಿದ್ದಾರೆ.

## ಸೋಮನಾಥನ ಮೇಲೆ ಸೂರ್ಯ ಕಿರಣ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪ್ರತಿವರ್ಷ ವೈಶಾಖ ಕೃಷ್ಣ ಪಕ್ಷದ ಶುಭದಿನದಂದು ಸೂರ್ಯೋದಯದ ಪ್ರಥಮ ಸೂರ್ಯನ ಕಿರಣಗಳು ನೇರವಾಗಿ ಪೂರ್ವಾಭಿಮುಖವಾಗಿರುವ ಇಲ್ಲಿನ ಸೋಮನಾಥ ದೇವರ ಮೇಲೆ ಬೀಳುವುದು ವಿಶೇಷವಾಗಿದೆ.

ಸೂರ್ಯನು ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಚಲಿಸುವ ಸಂದರ್ಭದಲ್ಲಿ ಈ ಕ್ರಿಯೆ ಜರುಗುತ್ತದೆ. ಮೇ 25ರಿಂದ 30ರವರೆಗೂ ಪ್ರತಿದಿನ ಮುಂಜಾನೆ 5-58ಕ್ಕೆ ಸೂರ್ಯನ ನೇರ ಕಿರಣಗಳು ಬೀಳುವ ಸುಂದರ ದೃಶ್ಯ ನೋಡಬಹುದಾಗಿದೆ. ಮೋಡ ಮುಸುಕಿದ ವಾತಾವರಣವಿದ್ದಲ್ಲಿ ಈ ಕ್ರಿಯೆಗೆ ಅಡಚಣೆಯಾಗಬಹುದಾಗಿದೆ ಎಂದು ಅರ್ಚಕ ಸೋಮನಾಥ ಪೂಜಾರ ಮಾಹಿತಿ ನೀಡಿದ್ದಾರೆ.

## ಅದಾನಿ ಕಲ್ಲಿದ್ದಲ ವಿವಾದ

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ಅವರಿಗೆ ಕನಿಷ್ಠ 21 ಅಂತಾರಾಷ್ಟ್ರೀಯ ಸಂಸ್ಥೆಗಳು ಪತ್ರ ಬರೆದಿದ್ದು, "ಇಂಡೋನೇಷ್ಯಾದ ಕಲ್ಲಿದ್ದಲು ಆಮದುಗಳ ಅತಿಯಾದ ಮೌಲ್ಯಮಾಪನಕ್ಕಾಗಿ ಅದಾನಿ ಗ್ರೂಪ್ ಸಂಸ್ಥೆಗಳ ವಿರುದ್ಧ ತನಿಖೆ ನಡೆಸುತ್ತಿರುವ ಕಂದಾಯ ಗುಪ್ತಚರ ನಿರ್ದೇಶನಾಲಯವು ಸಲ್ಲಿಸಿರುವ ಬಾಕಿ ಪ್ರಕರಣವನ್ನು ತ್ವರಿತವಾಗಿ ಪರಿಹರಿಸಬೇಕು" ಎಂದು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ಜಾರ್ಜ್ ಸೊರೊಸ್ ಬೆಂಬಲಿತ ಆರ್ಗನೈಸ್ಡ್ ಕ್ರೈಮ್ ಅಂಡ್ ಕರಪ್ಷನ್ ರಿಪೋರ್ಟಿಂಗ್ ಪ್ರಾಜೆಕ್ಟ್ (ಒಸಿಸಿಆರ್‌ಪಿ) ದಾಖಲೆಗಳನ್ನು ಉಲ್ಲೇಖಿಸಿ ಲಂಡನ್ ಮೂಲದ 'ಫೈನಾನ್ಷಿಯಲ್ ಟೈಮ್ಸ್' ವರದಿ ಮಾಡಿದ ನಂತರ ಈ ಪತ್ರವು ಬಂದಿದೆ. 2014 ರಲ್ಲಿ ಕಡಿಮೆ ದರ್ಜೆಯ ಕಲ್ಲಿದ್ದಲನ್ನು ಹೆಚ್ಚಿನ ಪ್ರಮಾಣದ ಇಂಧನ ಮೌಲ್ಯಕ್ಕೆ ಮಾರಾಟ ಮಾಡುವ ಮೂಲಕ ಅದಾನಿ ಗ್ರೂಪ್ ವಂಚನೆ ಮಾಡಿದೆ ಎನ್ನಲಾಗಿದೆ.

ಪಳೆಯುಳಿಕೆ ಇಂಧನಗಳ ನಿರಂತರ ಬಳಕೆಯ ವಿರುದ್ಧ ತಾವು ದೃಢವಾಗಿ ನಿಲ್ಲುತ್ತೇವೆ ಎಂದು ವಾದಿಸಿರುವ ಸಂಸ್ಥೆಗಳು, ಫೈನಾನ್ಷಿಯಲ್ ಟೈಮ್ಸ್ ವರದಿಯು ತಮಿಳಿನಾಡಿನ ತಂಗೆಡ್ಕೊ ವಹಿವಾಟಿನಲ್ಲಿ ಅದಾನಿ ಗ್ರೂಪ್‌ನಿಂದ "ಕಡಿಮೆ-ಗುಣಮಟ್ಟದ ಕಲ್ಲಿದ್ದಲನ್ನು ಹೆಚ್ಚು ದುಬಾರಿ ಕ್ಲೀನರ್ ಇಂಧನ" ರವಾನಿಸುವ ತಾಜಾ ಮತ್ತು ವಿವರವಾದ ಪುರಾವೆಗಳನ್ನು ಒದಗಿಸಿದೆ.

ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್‌ಗೆ ಪತ್ರ ಬರೆದಿರುವ 21 ಅಂತಾರಾಷ್ಟ್ರೀಯ ಸಂಸ್ಥೆಗಳೆಂದರೆ ಆಸ್ಟ್ರೇಲಿಯನ್ ಸೆಂಟರ್ ಫಾರ್ ಇಂಟರ್‌ನ್ಯಾಶನಲ್ ಜಸ್ಟೀಸ್, ಬ್ಯಾಂಕ್‌ಟ್ರಾಕ್, ಬಾಬ್ ಬ್ರೌನ್ ಫೌಂಡೇಶನ್, ಕಲ್ಚರ್ ಅನ್‌ಸ್ಟೈನ್ಡ್, ಇಕೋ, ಎಕ್ಸ್‌ಟಿಂಕ್ಷನ್ ದಂಗೆ, ಫ್ರೆಂಡ್ಸ್ ಆಫ್ ದಿ ಅರ್ಥ್ ಆಸ್ಟ್ರೇಲಿಯಾ, ಲಂಡನ್ ಮೈನಿಂಗ್ ನೆಟ್‌ವರ್ಕ್, ಮ್ಯಾಕೆ ಕನ್ಸರ್ವೇಶನ್ ಗ್ರೂಪ್, ಮಾರ್ಕೆಟ್ ಫೋರ್ಸಸ್, ಮನಿ ದಂಗೆ, ಕಲ್ಲಿದ್ದಲಿನ ಆಚೆಗೆ ಸರಿಯಿರಿ, ಈಗ ಹವಾಮಾನ ಕ್ರಮಕ್ಕಾಗಿ ಹಿರಿಯರು, ಸ್ಟಾಂಡರ್ಡ್.ಅರ್ಥ್, ಸ್ಟಾಪ್ ಅದಾನಿ, ಸನ್‌ರೈಸ್ ಮೂವ್‌ಮೆಂಟ್, ಟಿಪ್ಪಿಂಗ್ ಪಾಯಿಂಟ್, ಟಾಕ್ಸಿಕ್ ಬಾಂಡ್‌ಗಳು, ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಶನಲ್ ಆಸ್ಟ್ರೇಲಿಯ, ಡಬ್ಲ್ಯೂ-ಜೆ ನಾಗಾನಾ ಯಾರ್‌ಬೈನ್ ಕಲ್ಚರಲ್ ಕಸ್ಟೋಡಿಯನ್ಸ್, ಮತ್ತು ಕ್ವೀನ್ಸ್‌ಲ್ಯಾಂಡ್ ಕನ್ಸರ್ವೇಶನ್ ಕೌನ್ಸಿಲ್ ಸೇರಿವೆ.

ಅದಾನಿ ಗ್ರೂಪ್ ಎಲ್ಲ ಆರೋಪಗಳನ್ನು ನಿರಾಕರಿಸಿದರೆ, ಸುದ್ದಿ ವರದಿಯನ್ನು ಮಾಜಿ ಕಾಂಗ್ರೆಸ್ ಮುಖ್ಯಸ್ಥ ರಾಹುಲ್ ಗಾಂಧಿ ಸೇರಿದಂತೆ ವಿರೋಧ ಪಕ್ಷದ ನಾಯಕರು ಉಲ್ಲೇಖಿಸಿದ್ದಾರೆ, ಆಪಾದಿತ ತಪ್ಪಿನ ಬಗ್ಗೆ ಜಂಟಿ ಸಂಸದೀಯ ಸಮಿತಿಯ ತನಿಖೆಗೆ ಒತ್ತಾಯಿಸಿದ್ದಾರೆ.

ಕಲ್ಲಿದ್ದಲಿನ ಗುಣಮಟ್ಟವನ್ನು ಲೋಡಿಂಗ್ ಮತ್ತು ಡಿಸ್ಚಾರ್ಜ್ ಮಾಡುವ ಹಂತದಲ್ಲಿ ಸ್ವತಂತ್ರವಾಗಿ ಪರೀಕ್ಷಿಸಲಾಯಿತು ಎಂದು ತಮಿಳುನಾಡು ಜನರೇಷನ್ ಮತ್ತು ಡಿಸ್ಟ್ರಿಬ್ಯೂಷನ್ ಕಂಪನಿ (ಟಾಂಗೆಡ್ಕೊ) ಅಧಿಕಾರಿಗಳು ಹೇಳಿದರು.

ಸರಬರಾಜು ಮಾಡಲಾದ ಕಲ್ಲಿದ್ದಲು ಅನೇಕ ಏಜೆನ್ಸಿಗಳಿಂದ ಇಂತಹ ವಿಸ್ತೃತ ಗುಣಮಟ್ಟದ ಪರಿಶೀಲನೆ ಪ್ರಕ್ರಿಯೆಯನ್ನು ಅಂಗೀಕರಿಸಿದೆ, ಸ್ಪಷ್ಟವಾಗಿ ಕಡಿಮೆ-ಗುಣಮಟ್ಟದ ಕಲ್ಲಿದ್ದಲು ಪೂರೈಕೆಯ ಆರೋಪವು ಆಧಾರರಹಿತ ಮತ್ತು ಅನ್ಯಾಯವಾಗಿದೆ. ಆದರೆ, ಸಂಪೂರ್ಣವಾಗಿ ಅಸಂಬದ್ಧವಾಗಿದೆ" ಎಂದು ವಕ್ತಾರರು ಹೇಳಿದರು.

ಇದಲ್ಲದೆ, ಪಾವತಿಯು ಸರಬರಾಜು ಮಾಡಿದ ಕಲ್ಲಿದ್ದಲಿನ ಗುಣಮಟ್ಟವನ್ನು ಅವಲಂಬಿಸಿರುತ್ತದೆ, ಇದನ್ನು ಪರೀಕ್ಷಾ ಪ್ರಕ್ರಿಯೆಯ ಮೂಲಕ ನಿರ್ಧರಿಸಲಾಗುತ್ತದೆ" ಎಂದು ಅವರು ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ ಶಿವಾನುಭವ ಕಾರ್ಯಕ್ರಮದಲ್ಲಿ ತೋಂಟದ ಸಿದ್ಧರಾಮ ಶ್ರೀಗಳು

# ಬುದ್ಧ, ಬಸವ, ಅಂಬೇಡ್ಕರ್ ಮಹಾಮಾನವತಾವಾದಿಗಳು

■ ವಿಜಯಸಾಕ್ಷಿ ಸುದ್ದಿ, ಗದಗ

ಬುದ್ಧ, ಬಸವ, ಅಂಬೇಡ್ಕರರು ಮಹಾನ್ ವ್ಯಕ್ತಿಗಳು, ಜೀವಪರ ಕಾಳಜಿಯುಳ್ಳವರು. ಸಮಸ್ತ ಜೀವರಾಶಿಗಳಿಗೆ ಕಲ್ಯಾಣ ಬಯಸುವ ವಿಶೇಷ ವ್ಯಕ್ತಿತ್ವವನ್ನು ಹೊಂದಿದ್ದ ಅವರು ಮಹಾನ್ ಮಾನವತಾವಾದಿಗಳು ಎಂದು ಡಾ. ತೋಂಟದ ಸಿದ್ಧರಾಮ ಶ್ರೀಗಳು ನುಡಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2694ನೇ ಶಿವಾನುಭವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, 2500 ವರ್ಷಗಳ ಹಿಂದೆ ವೇದ, ಆಗಮ, ಧರ್ಮ, ದೇವರು, ವರ್ಗ, ವರ್ಣಗಳ ಹೆಸರಿನಲ್ಲಿ ಶೋಷಣೆ, ಭೇದಭಾವ ನಡೆಯುತ್ತಿತ್ತು. ಇಂತಹ ಅಮಾನವೀಯ ಘಟನೆಗಳು ಜರುಗುತ್ತಿರುವ ಸಂದರ್ಭದಲ್ಲಿ ಗೌತಮ ಬುದ್ಧ ಅರಮನೆಯನ್ನು ತ್ಯಾಗ ಮಾಡಿ ಧ್ಯಾನಯೋಗದ ಮೂಲಕ ಧ್ಯಾನವನ್ನು ಸಂಪಾದಿಸಿ ಸಮಸ್ತ ಮನುಕುಲಕ್ಕೆ ಶಾಂತಿಯ ಸಂದೇಶವನ್ನು ನೀಡಿದ್ದಾರೆ. ಬುದ್ಧನ ಅಷ್ಟಾಂಗಿಕ ಮಾರ್ಗ, ನಾಲ್ಕು ಆರ್ಯಸತ್ಯಗಳು, ಪಂಚಶೀಲಗಳನ್ನು ಇಂದು ಚಿಂತನೆ ಮಾಡುವ ಅಗತ್ಯವಿದೆ. ಬುದ್ಧನ ಮಾನವೀಯ



ಸಂದೇಶಗಳು ಬಹಳಷ್ಟು ಜನರನ್ನು ಆಕರ್ಷಿಸಿ, ನೆರೆ ರಾಷ್ಟ್ರಗಳಿಗೂ ಹಬ್ಬಿದೆ. ಬುದ್ಧ, ಬಸವ, ಅಂಬೇಡ್ಕರ್ ಇವರು ಶೋಷಣೆ ಮತ್ತು ತುಳಿತಕ್ಕೆ ಒಳಗಾದವರನ್ನು ಮೇಲಕ್ಕೆತ್ತಿ ಮಹಾಮಾನವತಾವಾದಿಗಳಾಗಿದ್ದಾರೆ ಎಂದರು.

ಬೌದ್ಧ ಅನುಯಾಯಿಗಳಾದ ವೆಂಕಟೇಶಯ್ಯ ಗದಗ ಮುಖ್ಯಅತಿಥಿಗಳಾಗಿ ಭಾಗವಹಿಸಿ ಮಾತನಾಡಿ, ಪಂಚಶೀಲಗಳನ್ನು ಒಳಗೊಂಡಿರುವ ಬುದ್ಧವಂದನೆಯನ್ನು ಹೇಳಿ ಅನೇಕ ಮಹತ್ವದ ಸಂಗತಿಗಳನ್ನು ತಿಳಿಸಿಕೊಟ್ಟರು.

ಪಿಯುಸಿ ಪರೀಕ್ಷೆಯ ಕಲಾ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಪವಿತ್ರಾ ಹನಮಪ್ಪ ಹೊಸಳ್ಳಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಕನ್ನಡ ಮಾಧ್ಯಮದಲ್ಲಿ ಗದಗ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದ ನಿಮಿತ್ತ ಸೌಜನ್ಯ ದೊಡ್ಡಯಲ್ಲಪ್ಪ ಸಿಡ್ಲಣ್ಣವರ, ಸರಕಾರಿ ಪ್ರೌಢಶಾಲೆ ಲಿಂಗದಾಳ ಅವರನ್ನು ಪೂಜ್ಯರು ಸಂಮಾನಿಸಿದರು.

ಮೃತ್ಯುಂಜಯ ಹಿರೇಮಠ ಮತ್ತು ಗುರುನಾಥ ಸುತಾರ ತಂಡದವರು ವಚನ ಸಂಗೀತ ಹಾಡಿದರು. ಧರ್ಮಗ್ರಂಥ ಪಠಣವನ್ನು ಕು. ಮಲ್ಲಿಕಾರ್ಜುನ ದೇವಲಾಪೂರ, ವಚನ ಚಿಂತನೆಯನ್ನು ಕು. ಪ್ರಭು ಮೂಲಿಮನಿ ಇವರು ಮಾಡಿದರು. ಶಿವಾನುಭವದ ದಾಸೋಹ ಭಕ್ತಿಸೇವೆಯನ್ನು ವಹಿಸಿಕೊಂಡಿದ್ದ ಈಶಣ್ಣ ಮುನವಳ್ಳಿ ಅವರನ್ನು ಪೂಜ್ಯರು ಸಂಮಾನಿಸಿದರು.

ಸರ್ವರನ್ನು ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ. ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

ಕೆ.ಎ. ಬಳಿಗೇರ ಉಪನ್ಯಾಸ ನೀಡಿ, ಗೌತಮ ಬುದ್ಧರು ಸತ್ಯ, ಅಹಿಂಸೆ, ಅಸ್ತೆಯ, ಬ್ರಹ್ಮಚರ್ಯ ಈ ನಾಲ್ಕು ವಿಷಯಗಳಿಗೆ ಬಹಳಷ್ಟು ಒತ್ತು ಕೊಟ್ಟಿದ್ದಾರೆ. ಬೌದ್ಧ ಧರ್ಮ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅಪಾರ ಕೊಡುಗೆ ನೀಡಿದೆ. ಗೌತಮ ಬುದ್ಧನ ಸಂದೇಶಗಳು ನೊಂದ ಮನಸ್ಸಿಗೆ, ಬೆಂದ ಹೃದಯಕ್ಕೆ ಸಾಂತ್ವನ ನೀಡಿ ಸಮಾಜದಲ್ಲಿ ಶಾಂತಿ, ಸಾಮರಸ್ಯ ಉಂಟಾಗುವಂತೆ ಮಾಡಲು ಇವತ್ತಿಗೂ ಅಗತ್ಯವಾಗಿವೆ ಎಂದರು.

## ಶಿಕ್ಷಕ ವಿದ್ಯಾರ್ಥಿಯ ಮೇಲೆ ಒತ್ತಡ ಹೇರಬಾರದು

■ ವಿಜಯಸಾಕ್ಷಿ ಸುದ್ದಿ, ನರೇಗಲ್

ಒಂದು ಶಾಲೆಯ ನಿಜವಾದ ಆಸ್ತಿಯೆಂದರೆ ಅದು ಶಿಕ್ಷಕ ಮತ್ತು ವಿದ್ಯಾರ್ಥಿ. ಎಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧ ಚೆನ್ನಾಗಿರುತ್ತದೆಯೋ ಆ ಶಾಲೆ ಚೆನ್ನಾಗಿರುತ್ತದೆ ಮತ್ತು ಇತರರಿಗೆ ಮಾದರಿಯೂ ಆಗಿರುತ್ತದೆ ಎಂದು ಶಿಕ್ಷಣ ತಜ್ಞ ಸುರೇಶ ಕುಲಕರ್ಣಿ ಹೇಳಿದರು.

ಪಟ್ಟಣದ ಶ್ರೀ ಅನ್ನದಾನೇಶ್ವರ ಪದವಿ ಸಭಾಂಗಣದಲ್ಲಿ ಅಕ್ಷರ ಭಾರತ ಪ್ರತಿಷ್ಠಾನ ಗದಗ ಮತ್ತು ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿಯ ಆಶ್ರಯದಲ್ಲಿ ನಡೆದಿರುವ ಶಿಕ್ಷಕರ ಪುನಶ್ಚೇತನ ಕಾರ್ಯಕ್ರಮದಲ್ಲಿ ಅವರು 'ವಿದ್ಯಾರ್ಥಿ ಮತ್ತು ಶಿಕ್ಷಕ' ವಿಷಯವನ್ನು ಉದ್ದೇಶಿಸಿ ಮಾತನಾಡಿದರು.



ಶಿಕ್ಷಕರು ವಿದ್ಯಾರ್ಥಿಗಳ ಮೇಲೆ ಎಂದಿಗೂ ಒತ್ತಡವನ್ನು ಹೇರಬಾರದು. ಪ್ರೀತಿಯಂದ ಅವರ ಮನಸ್ಸನ್ನು ಗೆಲ್ಲುವ ಕಾರ್ಯವಾಗಬೇಕು. ಮೊದಲು ಶಿಕ್ಷಕನಲ್ಲಿ ತನ್ನ ವಿಷಯದ ಬಗ್ಗೆ ಆಳವಾದ ಜ್ಞಾನ, ಅದನ್ನು ವ್ಯಕ್ತಪಡಿಸುವ ಕೌಶಲ್ಯವಿದ್ದರೆ ಆತ ಖಂಡಿತವಾಗಿಯೂ ಮಕ್ಕಳ ಮೆಚ್ಚಿನ ಶಿಕ್ಷಕನಾಗುತ್ತಾನೆ. ಮುಖ್ಯ ಶಿಕ್ಷರೊಂದಿಗೆ ಉಳಿದ ಸಿಬ್ಬಂದಿಯವರು ಸೌಜನ್ಯದಿಂದ, ಪ್ರೀತಿಯಿಂದ ವರ್ತಿಸಿ, ಸಹಕಾರ ನೀಡುವುದನ್ನು ರೂಢಿಸಿಕೊಳ್ಳಬೇಕು. ವಿಜ್ಞಾನ ವಿಷಯದ ಶಿಕ್ಷಕರು ಕಪ್ಪು ಹಲಗೆಯ ಬಳಕೆಯನ್ನು ಹೆಚ್ಚಾಗಿ ಮಾಡಬೇಕು ಮತ್ತು ಪಠ್ಯದಲ್ಲಿನ ಚಿತ್ರಗಳನ್ನು ಸುಂದರವಾಗಿ ಚಿತ್ರಿಸುವ ಕಲೆಯನ್ನು ತಮ್ಮಲ್ಲಿ ಬೆಳೆಸಿಕೊಳ್ಳಬೇಕು. ಶಿಕ್ಷಕನ ಮಾತು ನಿಖರವಾಗಿರಬೇಕು, ಮಕ್ಕಳ ಮನಸ್ಸನ್ನು ಮುಟ್ಟುವಂತೆ ಮತ್ತು ತಟ್ಟುವಂತೆ ಇರಬೇಕೆಂದು ತಿಳಿಸಿದರು.

ಉಪನ್ಯಾಸಕ ರಮೇಶ ಕುಲಕರ್ಣಿ ನಿರೂಪಿಸಿದರು. ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಬಸವರಾಜ ವೀರಾಪೂರ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಬೂದಿಹಾಳ ಪರಿಚಯಿಸಿದರು.

## ಕೃಷ್ಣ ಸೇವಾ ಸಮಿತಿಯಿಂದ ಪ್ರತಿಭಾ ಪುರಸ್ಕಾರ

■ ವಿಜಯಸಾಕ್ಷಿ ಸುದ್ದಿ, ಗದಗ

ಎಸ್‌ಎಸ್‌ಎಲ್‌ಸಿ, ಐಸಿಐಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚಿನ ಅಂಕ ಪಡೆದ ಬ್ರಾಹ್ಮಣ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಕೃಷ್ಣ ಸೇವಾ ಸಮಿತಿ ಅರ್ಜಿ ಆಹ್ವಾನಿಸಿದೆ.

ಆಸಕ್ತರು ಅರ್ಜಿಯೊಂದಿಗೆ ಅಭ್ಯರ್ಥಿಯ ಭಾವಚಿತ್ರ, ಅಂಕಪಟ್ಟಿಯ ನಕಲು ಪ್ರತಿಯೊಂದಿಗೆ ಡಾ.ಸಂಜೀವ ನಾರಪ್ಪನವರ, ಕಾರ್ಯದರ್ಶಿಗಳು, ಕೃಷ್ಣ ಸೇವಾ ಸಮಿತಿ, ಮಲ್ಲಸಮುದ್ರ, ತಾ.,ಜಿ-ಗದಗ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ಸಲ್ಲಿಸಲು ಜೂನ್ 30ಕೊನೆಯ ದಿನವಾಗಿದೆ. ಹೆಚ್ಚಿನ ವಿವರಗಳಿಗಾಗಿ 9739639469, 6362027343 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ಕೋರಿದೆ.

## ತಾಪಂ, ಜಿಪಂ ಚುನಾವಣೆಗೆ ಸಿದ್ಧ




■ ವಿಜಯಸಾಕ್ಷಿ ಸುದ್ದಿ, ಮೈಸೂರು

ಲೋಕಸಭಾ ಚುನಾವಣೆ ಫಲಿತಾಂಶದ ನಂತರ ತಾಲ್ಲೂಕು, ಜಿಲ್ಲಾ ಪಂಚಾಯತಿಗಳ ಚುನಾವಣೆ ಹಾಗೂ ಬಿಬಿಎಂಪಿ ಚುನಾವಣೆ ಕೂಡ ನಡೆಸಲಾಗುವುದು. ಸರ್ಕಾರ ಚುನಾವಣೆ ನಡೆಸಲು ಸಿದ್ಧ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಮೈಸೂರಿನ ತಮ್ಮ ನಿವಾಸದ ಬಳಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗ ಉಚ್ಚ ನ್ಯಾಯಾಲಯಕ್ಕೆ ಹೋಗಲಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಅವರು ಮೇಲಿನಂತೆ ಪ್ರತಿಕ್ರಿಯೆ ನೀಡಿದರು.

ಕ್ಷೇತ್ರ ಪುನರ್ವಿಂಗಡನೆಗೆ ಜನವರಿವರೆಗೆ ಗಡುವು ಇದ್ದುದರ ಬಗ್ಗೆ ಮಾತನಾಡಿ ಈ ಬಗ್ಗೆ ಅಡ್ವೋಕೇಟ್ ಜನರಲ್ ಜೊತೆ ಚರ್ಚೆ ಮಾಡಿ ಅವರು ಕಾನೂನು ಪ್ರಕಾರ ಏನು ಮಾಡಬೇಕೆಂದು ಹೇಳುತ್ತಾರೋ ಹಾಗೆ ಮಾಡುತ್ತೇವೆ. ಪುನರ್ ವಿಂಗಡಣೆಯಾದ ಮೇಲೆ ಮೀಸಲಾತಿ ಮಾಡಲೇಬೇಕು ಎಂದರು.

## ಶ್ರೀ ಬೇವಿನ ಮರದ ಸತ್ಯಮ್ಮ ದೇವಿ ಮಹಾರಥೋತ್ಸವ

■ ವಿಜಯಸಾಕ್ಷಿ ಸುದ್ದಿ, ಗದಗ

ಸಮಿಪದ ಹಾತಲಗೇರಿ ಗ್ರಾಮದ ಶ್ರೀ ಬೇವಿನ ಮರದ ಸತ್ಯಮ್ಮ ದೇವಿ ಜಾತ್ರಾಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಮಹಾ ರಥೋತ್ಸವವು ಗ್ರಾಮದ ಪ್ರಮುಖ ಬೀದಿಗಳ ಮೂಲಕ ಪಾದಗಟಿವರಗೆ ಸಾಗಿತು. ರಥೋತ್ಸವದಲ್ಲಿ ಭಕ್ತರು ದೀಡನಮಸ್ಕಾರ ಹಾಕುತ್ತ ಸಾಗಿದರು. ಜಾತ್ರೆಯ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ಆಕರ್ಷಕವಾಗಿ ಅಲಂಕರಿಸಲಾಗಿತ್ತು. ಬೆಳಿಗ್ಗೆ



ಸತ್ಯಮ್ಮದೇವಿಗೆ ಪಂಚಾಮೃತ ಅಭಿಷೇಕ ಮಾಡಿ, ದೇವಿಗೆ ಚಿನ್ನ, ಬೆಳ್ಳಿ ಆಭರಣಗಳಿಂದ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು.

ರಾತ್ರಿ ಶ್ರೀ ಬೀರಲಿಂಗೇಶ್ವರ ನಾಟ್ಯ ಸಂಘದಿಂದ 'ಹುತ್ತದಲ್ಲಿ ಕೈಯಿಟ್ಟ ಮುತ್ತೈದೆ' ಎಂಬ ಸುಂದರ ಸಾಮಾಜಿಕ ನಾಟಕವನ್ನು ಪ್ರದರ್ಶಿಸಲಾಯಿತು.

'ಪುಲಿಗೆರೆ ಪೌರ್ಣಿಮೆ' ಕಾರ್ಯಕ್ರಮದಲ್ಲಿ ಸೋಮಶೇಖರ ಕೆರಿಮನಿ ಅಭಿಮತ

# ಸೋಮೇಶ್ವರ ದೇವಸ್ಥಾನ ಪಟ್ಟಣದ ಹೆಮ್ಮೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಾವಿರಾರು ವರ್ಷಗಳ ಭವ್ಯ ಇತಿಹಾಸವನ್ನು ಹೊಂದಿರುವ ಸೋಮೇಶ್ವರ ದೇವಸ್ಥಾನ ಈ ಭಾಗದ ಜನರ ಭಕ್ತಿ, ಶ್ರದ್ಧಾ ಕೇಂದ್ರವಾಗಿದ್ದು, ಪಟ್ಟಣಕ್ಕೆ ಈ ದೇವಸ್ಥಾನ ಮುಕುಟ ಪ್ರಾಯವಿದ್ದಂತೆ. ಇದರ ಮಹತ್ವ, ಶ್ರೇಷ್ಠತೆ ಎಲ್ಲರಿಗೂ ತಿಳಿಸುವ ಕಾರ್ಯವನ್ನು ಮಾಡಬೇಕು ಎಂದು ಉಪನ್ಯಾಸಕ ಸೋಮಶೇಖರ ಕೆರಿಮನಿ ಹೇಳಿದರು.

ಅವರು ಲಕ್ಷ್ಮೇಶ್ವರ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ವತಿಯಿಂದ ಪ್ರತಿ ಹುಣ್ಣಿಮೆಯಂದು ಹಮ್ಮಿಕೊಳ್ಳಲಾಗುವ 'ಪುಲಿಗೆರೆ ಪೌರ್ಣಿಮೆ' ಕಾರ್ಯಕ್ರಮ ಸರಣಿಯ 30ನೇ ಸಂಚಿಕೆಯಲ್ಲಿ ಉಪನ್ಯಾಸ ನೀಡಿ ಮಾತನಾಡಿದರು.

ದೇವಸ್ಥಾನಗಳು ಧಾರ್ಮಿಕ ಶ್ರದ್ಧಾ ಕೇಂದ್ರಗಳು ಮಾತ್ರವಲ್ಲ, ಅವು ನಮ್ಮ ಶ್ರೇಷ್ಠ ಪರಂಪರೆಯ ರಾಯಭಾರಿಗಳು. ಇದಕ್ಕೆ ಉತ್ತಮ ಉದಾಹರಣೆ ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನವಾಗಿದೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬ್ರಹ್ಮಾಕುಮಾರಿ ನಾಗಲಾಂಬಿಕೆ, ಐತಿಹಾಸಿಕ, ಸಾಂಸ್ಕೃತಿಕ, ಸಾಹಿತ್ಯಿಕವಾಗಿ ಸೋಮೇಶ್ವರ ದೇವಸ್ಥಾನದ ಪಾತ್ರ ಮಹತ್ತರವಾದುದು. ಅಂತಹ ಹಿರಿಮೆ ಸಾರುವ ಇಲ್ಲಿ ಪ್ರತಿ ಹುಣ್ಣಿಮೆಯಂದು ಉತ್ತಮ ಕಾರ್ಯಕ್ರಮ ಸಂಘಟಿಸಲಾಗುತ್ತಿರುವದು ಶ್ಲಾಘನೀಯ ಎಂದರು.



ವಿದ್ಯುತ್ ಸರಬರಾಜು ನಿಗಮದ ಗುರುರಾಜ್ ಸಿ, ವಾಸಣ್ಣ ಪಾಟೀಲ ಕುಲಕರ್ಣಿ ಮಾತನಾಡಿದರು. ಕಾರ್ಯಕ್ರಮದಲ್ಲಿ ನೀಲಪ್ಪ ಕರ್ಜ್ರಕ್ಕಣ್ಣನವರ, ಸುರೇಶ ರಾಚನಾಯ್ಕರ, ಸಿದ್ದನಗೌಡ್ರ ಬಳ್ಳೊಳ್ಳಿ, ಎಸ್.ಎಫ್. ಆದಿ, ಪಿ.ಬಿ. ಖರಾಟೆ, ಎನ್.ಆರ್. ಸಾತಪೂತೆ, ದೇವಣ್ಣ ಬಳಿಗಾರ, ಸೋಮಣ್ಣ ಅಣ್ಣಿಗೇರಿ, ಎಂ.ಶಿದ್ಲಿಂಗಯ್ಯ, ಗೀತಾ ಮಾನ್ವಿ, ಲಲಿತಕ್ಕ ಕೆರಿಮನಿ, ಸರೋಜಕ್ಕ ಬನ್ನೂರ, ಸೋಮಣ್ಣ ಮುಳಗುಂದ, ಕುಬೇರಪ್ಪ ಮಹಾಂತಶೆಟ್ಟರ, ಎಂ.ಎನ್. ಹುಬ್ಬಳ್ಳಿ, ವಿರುಪಾಕ್ಷಪ್ಪ ಆದಿ, ಎಸ್.ಎ. ಸಾತಣ್ಣನವರ, ಅಶೋಕ ನೀರಾಲೋಟಿ ಹಾಗೂ ಇತರರು ಹಾಜರಿದ್ದರು.

ಜಯಪ್ರಕಾಶ ಹೊಟ್ಟಿ, ನಾಗರಾಜ ಕಳಸಾಪೂರ, ಜಿ.ಎಸ್. ಗುಡಗೇರಿ ನಿರ್ವಹಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಮಿಟಿ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಈ ನಾಡು ಸಂಗೀತ, ನೃತ್ಯ ಕಲೆಗಳಿಗೆ ಮೊದಲಿನಿಂದಲೂ ಹೆಸರು ಮಾಡಿದ್ದು, ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗುವದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಕಳೆದ ಮೂರು ವರ್ಷಗಳಿಂದ ಅನೇಕ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕ್ರಿಯಾಶೀಲವಾಗಿರುವಂತೆ ನೋಡಿಕೊಳ್ಳಲಾಗುತ್ತಿದೆ ಎಂದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka